# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA
Email: hampitimes@gmail.com | M:94486 33038

ಸಂಪುಟ:02 • ಸಂಚಿಕೆ: 44 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 10.08.2024 • ಶನಿವಾರ • ಪುಟ:04 • ಬೆಲೆ:2
Volume:02 • Issue: 44 • PRGI No:KARKAN/2023/88055 • VIJAYANAGARA • 10.08.2024 • Saturday • Page:04 • Rs:2



ಇಂದು ಹಾಗೂ ಹಿಂದಿನ ಹಂಪಿ ಟೈಮ್ಸ್ ಕಲರ್‌ಫುಲ್ ಇ-ದಿನಪತ್ರಿಕೆ ಓದಲು QR ಕೋಡ್ ಸ್ಕ್ಯಾನ್ ಮಾಡಿ ಓದಿರಿ

No.1 Leading in Local News Paper

80,000

HAMPI TIMES E-PAPER READERS

94486 33038 | NEWS PAPER ADD - THE BEST ADVERTISING PLATFORM TO BOOST YOUR BUSINESS

E-mail: hampitimes@gmail.com | # Valmiki Circle hospet-583201





ಹಂಪಿ ಟೈಮ್ಸ್ ಮಾರ್ಗದರ್ಶಿ
ಇ-ಪೇಪರ್‌ನಲ್ಲೂ ಲಭ್ಯ
ಕೆಳಗಿನ ವಿಳಾಸಕ್ಕೆ ಭೇಟಿ ನೀಡಿ..
www.hampitimes.com
epaper.hampitimes.com

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
Place your ads here
reach more readers
No.1
Why Choose Us?
- Experienced Professionals
- Fast and Reliable Service
- Customized Solutions
- Competitive Pricing

E-mail: hampitimes@gmail.com
www.hampitimes.com
epaper.hampitimes.com
9448633038


# ಪರಿಸರ ನಾಶಗೊಳಿಸಿದರೆ ಬದುಕಲು ಸಾಧ್ಯವಿಲ್ಲ

## ಪ್ರೊ.ಗಿರೀಶ್ ಎಸ್.ಟಿ. ಅಭಿಮತ | ಪಂಚಭೂತಗಳಲ್ಲಡಗಿದೆ ಜೀವಸೃಷ್ಟಿಯ ರಹಸ್ಯ

■ ಹಂಪಿ ಟೈಮ್ಸ್ ಹೊಸಪೇಟೆ

ಭೂಮಿಯಲ್ಲಿ ಜೀವಿಗಳ ಸೃಷ್ಟಿಗೆ ಪಂಚಭೂತಗಳೇ ಮೂಲ ಕಾರಣ. ಜೀವಿಯ ಉಗಮದಲ್ಲಿ ಮಹತ್ವದ ಪಾತ್ರವಹಿಸುವ ಗಾಳಿ, ನೀರು ಮತ್ತು ಬೆಳಕನ್ನು ಇಂದು ನಾವು ಬಂಧನಗೊಳಿಸುತ್ತಿದ್ದೇವೆ. ಇದು ಪ್ರಕೃತಿಯ ವಿನಾಶಕ್ಕೆ ಪ್ರಮುಖ ಕಾರಣವಾಗಿದೆ ಎಂದು ಬೆಂಗಳೂರು ವಿಶ್ವವಿದ್ಯಾಲಯದ ಸೂಕ್ಷ್ಮ ಜೀವ ವಿಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ವಿಭಾಗದ ಮುಖ್ಯಸ್ಥರಾದ ಪ್ರೊ.ಗಿರೀಶ್ ಎಸ್.ಟಿ. ಅವರು ಅಭಿಪ್ರಾಯಪಟ್ಟರು.

ಕನ್ನಡ ವಿಶ್ವವಿದ್ಯಾಲಯದ ವಿಜ್ಞಾನಗಳ ಇತಿಹಾಸ ವಿಭಾಗದಿಂದ ಪಂಪ ಸಭಾಂಗಣದಲ್ಲಿ ಶುಕ್ರವಾರ ಆಯೋಜಿಸಿದ್ದ ಪರಿಸರ ಮತ್ತು ಹವಾಮಾನ ಬದಲಾವಣೆ ಕುರಿತು ಏರ್ಪಡಿಸಿದ್ದ ವಿಶೇಷ ಉಪನ್ಯಾಸ ಮಾಲೆ ಉದ್ಘಾಟಿಸಿ ಮಾತನಾಡಿದರು. ಜೀವ ವಿಜ್ಞಾನದಿಂದ ನಾವು ಹೊಸ ಹೊಸ ಜೀವಿಗಳನ್ನು ಸೃಷ್ಟಿಸಲು ಸಾಧ್ಯವಿದೆ. ಆದರೆ ಅದು ಎಷ್ಟರ ಮಟ್ಟಿಗೆ ಸರಿ ಎಂಬ ಚರ್ಚೆಗಳು ನಡೆಯುತ್ತಿವೆ. ಪ್ರತಿಯೊಂದು ಜೀವಿಗೂ ಅದರದೇ ಆದ ವೈಶಿಷ್ಟ್ಯವಿದ್ದು, ಅದರ ಅಸ್ಮಿತೆಯನ್ನು ಉಳಿಸಿಕೊಳ್ಳುವುದು ಕೂಡ ಮುಖ್ಯವಾಗುತ್ತದೆ. ನಮಗೆ ಪ್ರಕೃತಿ ಬೇಕೆ ಹೊರತು, ಪ್ರಕೃತಿಗೆ ನಮ್ಮ ಅವಶ್ಯಕತೆಯಿಲ್ಲ. ಪರಿಸರ ಇಲ್ಲದಿದ್ದರೆ ನಾವು ಬದುಕಲು ಸಾಧ್ಯವಿಲ್ಲ. ಆದ್ದರಿಂದ ಪರಿಸರವನ್ನು ಉಳಿಸುವುದು ನಮ್ಮೆಲ್ಲರ ಜೀವನದ ಪಾಠವಾಗಬೇಕು ಎಂದು ಅವರು ತಿಳಿಸಿದರು.

ಬೆಂಗಳೂರು ವಿಶ್ವವಿದ್ಯಾಲಯದ ಪರಿಸರ ವಿಜ್ಞಾನ ವಿಭಾಗದ ಪ್ರಾಧ್ಯಾಪಕರಾದ ಪ್ರೊ.ಬಿ.ಸಿ.ನಾಗರಾಜ ಮಾತನಾಡಿ, ಅಭಿವೃದ್ಧಿಯ ಹೆಸರಿನಲ್ಲಿ ಇಂದು ಪರಿಸರದ ವಿನಾಶ ಹೆಚ್ಚುತ್ತಿದೆ. 1972 ರಲ್ಲಿ ಮೊದಲ ಬಾರಿಗೆ ಪರಿಸರ ಜಾಗೃತಿ ಕುರಿತಂತೆ ವಿಶ್ವಸಂಸ್ಥೆಯಲ್ಲಿ ಸಭೆ ನಡೆಸಲಾಯಿತು. ಈ ಸಭೆಯಲ್ಲಿ ಜಗತ್ತಿನ ವಿವಿಧ ದೇಶಗಳು ಪಾಲ್ಗೊಂಡು ಪರಿಸರ ಸಂರಕ್ಷಣೆ ಬಗ್ಗೆ ಚರ್ಚೆ ನಡೆಸಿದವು. ಇದರ ಸವಿನೆನಪಿಗಾಗಿ ಪ್ರತಿವರ್ಷ ಜೂನ್ 5 ರಂದು ವಿಶ್ವ ಪರಿಸರ ದಿನಾಚರಣೆಯನ್ನು ಆಚರಿಸಲಾಗುತ್ತದೆ. ಭಾರತದಲ್ಲಿ ಭೂಪಾಲ್ ಅನಿಲ್ ದುರಂತದ ನಂತರ ಎಚ್ಚೆತ್ತುಕೊಂಡ ಸರ್ಕಾರ 1985 ರಲ್ಲಿ ಪರಿಸರ ಸಚಿವಾಲಯವನ್ನು ಆರಂಭಿಸಿತು. ನಮ್ಮ ದೇಶದಲ್ಲಿ 1974ರಲ್ಲಿ ಸುಂದರಲಾಲ್ ಬಹುಗುಣ ಅವರ ಚಿಪ್ಕೋ ಚಳುವಳಿ, ಪಾಂಡುರಂಗ ಅವರ ನೇತೃತ್ವದಲ್ಲಿ ನಡೆದ ಅಪ್ಪಿಕೋ ಚಳುವಳಿ, ಸಾಲುಮರದ ತಿಮ್ಮಕ್ಕ, ರಾಜೇಂದ್ರಸಿಂಗ್ ಅವರ ಪರಿಸರ ಕಾಳಜಿ ಹೀಗೆ ಹಲವಾರು ಜನರು ಪರಿಸರ ಸಂರಕ್ಷಣೆಯಲ್ಲಿ ನಿರ್ವಹಿಸಿದ ಪಾತ್ರ ಅಪಾರವಾದುದು ಎಂದು ತಿಳಿಸಿದರು. ವಾತಾವರಣದಲ್ಲಿ ಹಸಿರುಮನೆ ಅನಿಲಗಳ ಪ್ರಮಾಣ ಹೆಚ್ಚುತ್ತಿರುವುದರಿಂದ ಉಷ್ಣಾಂಶವು ಏರುಗತಿಯನ್ನು ತಲುಪಿದೆ. ಈ ಹಿನ್ನೆಲೆಯಲ್ಲಿ ಜಾಗತೀಕ ಮಟ್ಟದಲ್ಲಿ ಸುಸ್ಥಿರ ಅಭಿವೃದ್ಧಿಯ ಕುರಿತಂತೆ ದೊಡ್ಡ ಮಟ್ಟದಲ್ಲಿ ಚರ್ಚೆಗಳು ಮಾಡುತ್ತವೆ. ಸುಸ್ಥಿರತೆಯನ್ನು ಕಾಪಾಡುವಲ್ಲಿ ಉಳ್ಳವರು ಮತ್ತು ಇಲ್ಲದವರ ನಡುವಿನ ಅಸಮಾನತೆಯನ್ನು ತೊಡೆದು ಹಾಕಬೇಕು. ಅತಿವೃಷ್ಠಿ-ಅನಾವೃಷ್ಠಿಯಿಂದ ತೊಂದರೆಗೊಳಾಗುವ ಜನರನ್ನು ನಿರಾಶ್ರಿತರೆಂದು ಪರಿಗಣಿಸಿ ಅವರಿಗೆ ಪರಿಹಾರ ಧನವನ್ನು ನೀಡಬೇಕೆಂದು ವಿಶ್ವಸಂಸ್ಥೆ ಹೇಳುತ್ತದೆ. ಸುಸ್ಥಿರ ಅಭಿವೃದ್ಧಿಯ 17 ಗುರಿಗಳನ್ನು ಯುವ ಸಂಶೋಧಕರು ತಮ್ಮ ಸಂಶೋಧನೆಯಲ್ಲಿ ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

ಕನ್ನಡ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಡಾ.ಡಿ.ವಿ.ಪರಮಶಿವಮೂರ್ತಿ ಅವರು ಅಧ್ಯಕ್ಷತೆವಹಿಸಿ ಮಾತನಾಡಿ, ಉತ್ತಮ ವಾತಾವರಣದಲ್ಲಿದ್ದಾಗ ನಮಗೆ ಅದರ ಅರಿವು ಆಗುವುದಿಲ್ಲ. ಗಣಿಗಾರಿಕೆ, ಕಾರ್ಖಾನೆ, ಟ್ರಾಫಿಕ್ ಜಾಮ್‌ನಿಂದ ಆಗುವ ಮಾಲಿನ್ಯದಿಂದ ಕೂಡಿದ ಪರಿಸರಕ್ಕೆ ಹೋದಾಗ ನಮಗೆ ಪರಿಸರದ ಮಹತ್ವ ಗೊತ್ತಾಗುತ್ತದೆ. ಪರಿಸರವನ್ನು ಉಳಿಸುವುದು ನಮ್ಮೆಲ್ಲರ ಕರ್ತವ್ಯ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಕುಲಸಚಿವ ಡಾ.ವಿಜಯ್ ಪೂಣಚ್ಚ ತಂಬಂಡ ಮಾತನಾಡಿದರು. ವಿಜ್ಞಾನಗಳ ಇತಿಹಾಸ ವಿಭಾಗದ ಮುಖ್ಯಸ್ಥರಾದ ಪ್ರೊ.ಶೈಲಜ ಇಂ.ಹಿರೇಮಠ ಪ್ರಾಸ್ತಾವಿಕವಾಗಿ ಮಾತನಾಡಿದರು. ವಿವಿಧ ನಿಕಾಯಗಳ ಡೀನರು, ಮುಖ್ಯಸ್ಥರು, ಪ್ರಾಧ್ಯಾಪಕರು, ಸಂಶೋಧನಾರ್ಥಿಗಳು ಉಪಸ್ಥಿತರಿದ್ದರು.




ಫೋಟೋ ನ್ಯೂಸ್

## ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಪ್ರವೇಶಕ್ಕೆ ಅರ್ಜಿ ಆಹ್ವಾನ

ಹಂಪಿ ಟೈಮ್ಸ್ ಹೊಸಪೇಟೆ

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ (ಸಾಮಾನ್ಯ ಕೋರ್ಸಿನ ವಿದ್ಯಾರ್ಥಿಗಳಿಗೆ) ವಿದ್ಯಾರ್ಥಿ ನಿಲಯಗಳಿಗೆ ಹೊಸದಾಗಿ ಪ್ರವೇಶ ಬಯಸುವ ಸಾಮಾನ್ಯ ಪದವಿ ಕೋರ್ಸಿನ ಪ್ರವರ್ಗ-1, 2ಎ, 2ಬಿ, 3ಎ,3 ಬಿ, ಪ.ಜಾತಿ ಮತ್ತು ಪ.ವರ್ಗದ ವಿದ್ಯಾರ್ಥಿಗಳಿಗೆ 2024-25ನೇ ಸಾಲಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ವಿದ್ಯಾರ್ಥಿಯ ಪೋಷಕರ ವಾರ್ಷಿಕ ಆದಾಯ ಮಿತಿ : ಪ್ರವರ್ಗ-1 ಎಸ್.ಸಿ ಮತ್ತು ಎಸ್.ಟಿ ರೂ.2.50 ಲಕ್ಷ ಇರಬೇಕು. ಪ್ರವರ್ಗ 2ಎ, 2ಬಿ, 3ಎ,3 ಬಿ, ಇತರೆ ಹಿಂದುಳಿದ ವರ್ಗ ಹಾಗೂ ಇತರೆರೂ.1.ಲಕ್ಷ ಇರಬೇಕು. >>3

## ಕೃಷಿ ಪ್ರಶಸ್ತಿಗೆ ಅರ್ಜಿ ಆಹ್ವಾನ


ಹಂಪಿ ಟೈಮ್ಸ್ ಬಳ್ಳಾರಿ

ಕೃಷಿ ಇಲಾಖೆ ವತಿಯಿಂದ ಪ್ರಸ್ತಕ ಸಾಲಿನ ಮುಂಗಾರು ಮತ್ತು ಹಿಂಗಾರು ಹಂಗಾಮಿನ ಬೆಳೆ ಸ್ಪರ್ಧೆ ಕಾರ್ಯಕ್ರಮದಡಿ ಕೃಷಿ ಪ್ರಶಸ್ತಿಗೆ ಅರ್ಹ ರೈತರಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಜಂಟಿ ಕೃಷಿ ನಿರ್ದೇಶಕ ಡಾ.ಕೆ.ಸೋಮಸುಂದರ್ ಅವರು ತಿಳಿಸಿದ್ದಾರೆ. ಕೃಷಿ ಇಲಾಖೆಯ ಕೆ-ಕಿಸಾನ್ ಪೋರ್ಟಲ್‌ನಲ್ಲಿ ನೂತನವಾಗಿ ಕೃಷಿ ಪ್ರಶಸ್ತಿಗೆ ಅರ್ಜಿ ನಮೂನೆಯನ್ನು ಆಳವಡಿಸಲಾಗಿದ್ದು, ಸಿಟಿಜನ್ ಲಾಗಿನ್ ಅಥವಾ ಆರ್‌ಎಸ್‌ಕೆ ಲಾಗಿನ್ ಮೂಲಕ ಹತ್ತಿರದ ರೈತ ಸಂಪರ್ಕ ಕೇಂದ್ರ, ಸೇವಾ ಕೇಂದ್ರ ಅಥವಾ ಸ್ವತಃ ಕೆ-ಕಿಸಾನ್ ಪೋರ್ಟಲ್‌ನಲ್ಲಿ ಅಗತ್ಯ ದಾಖಲಾತಿಗಳೊಂದಿಗೆ ತಮ್ಮ ಎಫ್‌ಐಡಿ ಬಳಸಿಕೊಂಡು ಅರ್ಜಿ ಸಲ್ಲಿಸಬೇಕು. ಅರ್ಜಿ ಶುಲ್ಕವಿರುವುದಿಲ್ಲ. ಮುಂಗಾರು ಹಂಗಾಮಿನ ಕೃಷಿ ಪ್ರಶಸ್ತಿಗೆ ಆ.31 ನೋಂದಾಯಿಸಲು ಕೊನೆಯ ದಿನ ಮತ್ತು ಹಿಂಗಾರು ಹಂಗಾಮಿನ ಕೃಷಿ ಪ್ರಶಸ್ತಿಗೆ ನವೆಂಬರ್ 30 ಕೊನೆಯ ದಿನವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಜಂಟಿ ಕೃಷಿ ನಿರ್ದೇಶಕರ ಕಚೇರಿ ಅಥವಾ ದೂ.08392-276224 ಗೆ ಸಂಪರ್ಕಿಸಬಹುದು ಎಂದು ತಿಳಿಸಿದ್ದಾರೆ.

# ಬೀದಿನಾಯಿಗಳ ಹಾವಳಿಗೆ ಬ್ರೇಕ್

## ವೈದ್ಯರಿಂದ ಚಿಕಿತ್ಸೆ | ಪಟ್ಟಣದ ಬೀದಿನಾಯಿಗಳಿಗೆ ಸಂತಾನ ಹರಣ ಶಸ್ತ್ರ ಚಿಕಿತ್ಸೆ





■ ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ

ಪಟ್ಟಣದಲ್ಲಿ ಸುಮಾರು ದಿನಗಳಿಂದ ಬೀದಿನಾಯಿಗಳ ಹಾವಳಿ ಹೆಚ್ಚುತ್ತಿರುವ ಬಗ್ಗೆ ಸಾರ್ವಜನಿಕರ ದೂರು, ಮಾಧ್ಯಮಗಳಲ್ಲಿ ಬಂದ ವರದಿಗಳಿಗೆ ಸ್ಪಂದಿಸಿದ ಇಲ್ಲಿಯ ಪುರಸಭೆ ಅಧಿಕಾರಿಗಳು, ಬೀದಿನಾಯಿಗಳಿಗೆ ಕಡಿವಾಣ ಹಾಕಲು, ಅವುಗಳನ್ನಿಡಿದು ಪಶುವೈದ್ಯಾಧಿಕಾರಿಗಳಿಂದ ಸಂತಾನ ಹರಣ ಶಸ್ತ್ರ ಚಿಕಿತ್ಸೆಗೆ ಮುಂದಾಗಿದ್ದಾರೆ.

ಬಹುತೇಕ ಪುರಸಭೆ ವ್ಯಾಪ್ತಿಯಲ್ಲಿ 300ಕ್ಕೂ ಹೆಚ್ಚು ಬೀದಿನಾಯಿಗಳಿದ್ದು ಅವುಗಳ ನಿಯಂತ್ರಣಕ್ಕೆ, ಇಲ್ಲಿಯ ಪುರಸಭೆಯವರು ಡಾಗ್‌ಕ್ಯಾಚ್ ಕುರಿತು ಒಂದೆರಡು ಪ್ರಕಟಣೆಕೂಡ ಮಾಡಿದ್ದರೂ. ಆದರೆ, ಯಾರು ಮುಂದೆ ಬಾರದ ಹಿನ್ನೆಲೆಯಲ್ಲಿ ಕೈಚೆಲ್ಲಿ ಕುಳಿತುಕೊಳ್ಳುವಂತ ಪರಿಸ್ಥಿತಿ ಬಂದಿತು. ಇತ್ತ ಮಕ್ಕಳ ಸೇರಿದಂತೆ ಜಾನುವಾರುಗಳ ಮೇಲೂ ಬೀದಿ ನಾಯಿಗಳು ದಾಳಿ ಕಡಿಮೆಯಾಗಲಿಲ್ಲ. ಸಾರ್ವಜನಿಕರು ಪುರಸಭೆಗೆ ಬಂದು ಗಲಾಟೆಕೂಡ ಮಾಡಿದ ಪ್ರಸಂಗ ಕೂಡ ಜರುಗಿತು. ನಂತರ ಇತ್ತೀಚಿಗೆ ಹೊಸಪೇಟೆಯಲ್ಲಿ ಒಂದು ಮಗುವಿನ ಮೇಲೆ ಗುಂಪು ನಾಯಿಗಳು ದಾಳಿ ಮಾಡಿದ ಘಟನೆ ಇಲ್ಲಿಯ ಪಟ್ಟಣದ ಜನರನ್ನು ಇನ್ನಷ್ಟು ಕೆರಳಿಸಿತು. ಇದಲ್ಲದೆ, ಇಲ್ಲಿಯ ಎಲ್ಲಾ ವಾರ್ಡ್‌ಗಳ ಸದಸ್ಯರಿಂದಲೂ ದೂರುಗಳು ಬಂದ ಹಿನ್ನೆಲೆಯಲ್ಲಿ ಮತ್ತು ಶಾಸಕ ಕೆ.ನೇಮಿರಾಜ್ ನಾಯ್ಕ್‌ರವರು, ಜಿಲ್ಲಾಧಿಕಾರಿ ಗಳು ಕೂಡ ಪುರಸಭೆಗೆ ನಿರಂತರ ಸೂಚನೆ ನೀಡಿದ ಬಳಿಕ ಎಚ್ಚೆತ್ತುಕೊಂಡ ಪುರಸಭೆಯ ಅಧಿಕಾರಿಗಳು ಪಶುವೈದ್ಯಾಧಿಕಾರಿಗಲ್ಲಿ ಮಾತನಾಡಿ, ಡಾಗ್‌ಕ್ಯಾಚರ್‌ಗಳನ್ನು ಮೈಸೂರಿನ ಚಾಮರಾಜನಗರ ಪೇಟೆಯಿಂದ ಕರೆಸುವ ಮೂಲಕ ಕಾರ್ಯಾನು ಮುಖರಾಗಿದ್ದಾರೆ. ಈ ಬಗ್ಗೆ ಪಶುಸಂಗೋಪನೆ ಇಲಾಖೆಯ ತಾಲೂಕು ನಿರ್ದೇಶಕರಾದ ಡಾ.ಸೂರಪ್ಪ ಮಾತನಾಡಿ, ಬೀದಿನಾಯಿಗಳ ಹಾವಳಿಯಿಂದ ರೋಸಿಹೋಗಿದ್ದ ಸಾರ್ವ ಜನಿಕರ ದೂರಿನ ಹಿನ್ನೆಲೆಯಲ್ಲಿ, ಇಲ್ಲಿಯ ಶಾಸಕರ ಮತ್ತು ಪುರಸಭೆ ಅಧಿಕಾರಿಗಳ ನಿರ್ದೇಶನದಂತೆ, ಡಾಗ್ ಕ್ಯಾಚರ್‌ಗಳ ವಿಶೇಷ ತಂಡದವರನ್ನು ಕರೆದು ಅವರ ಸಹಕಾರದೊಂದಿಗೆ ಕನಿಷ್ಠ 100 ನಾಯಿಗಳ ಸಂತಾನ ಹರಣ ಶಸ್ತ್ರ ಚಿಕಿತ್ಸೆ ಮಾಡುಲಾಗುತ್ತಿದೆ. ಪಟ್ಟಣದ ಬೀದಿ, ಓಣಿ ಓಣಿಗಳಲ್ಲಿ ಅವುಗಳನ್ನು ಕ್ಯಾಚ್‌ಮಾಡಿ, ಅರವಳಿಕೆ ಔಷಧಿನೀಡಿ, ಶಸ್ತ್ರ ಚಿಕಿತ್ಸೆ ಮಾಡಲಾಗುತ್ತಿದೆ. ಬಳಿಕ ಅವುಗಳನ್ನು ಒಂದು ಕಠಡಿಯಲ್ಲಿಟ್ಟು 5ದಿನಗಳ ಪರಿವೀಕ್ಷಣೆಯ ಬಳಿಕ ಅವುಗಳನ್ನು ಬಿಡಲಾಗುತ್ತದೆ. ಇದರಿಂದ ಬಹುತೇಕ ಬೀದಿನಾಯಿಗಳ ಹೆಚ್ಚಳ, ಹಾವಳಿಗೆ ಕಡಿವಾಣ ಹಾಕಿದಂತಾಗುತ್ತದೆ ಎಂದರು.

> ಚಿಕಿತ್ಸೆಯಿಂದ ಪಟ್ಟಣದಲ್ಲಿ ಕೆಲ ದಿನಗಳಲ್ಲಿಯೇ ಬೀದಿನಾಯಿಗಳ ಹಾವಳಿ ಕಡಿಮೆಯಾಗಲಿದೆ. ಈ ಚಿಕಿತ್ಸೆಯ ಬಳಿಕ ರ್ಯಾಬೀಸ್ ಇಂಜಕ್ಷನ್ ಕೂಡ ಮಾಡಲಾಗುತ್ತದೆ, ಇದರ ಪರಿಣಾಮ ಒಂದು ವರ್ಷದವರೆಗೂ ಇರುತ್ತದೆ. ಅಲ್ಲದೆ, ಸಂತಾನಹರಣ ಚಿಕಿತ್ಸೆಯಿಂದ ನಾಯಿಗಳಲ್ಲಿ ನಿಶಕ್ತಿಯಾಗಿ, ಸಂಭೋಗ ಕ್ರಿಯೆ ಕೂಡ ಕಡಿಮೆಯಾಗುತ್ತದೆ. ಈಗ ಗುರಿ 100 ಇದ್ದು, ಮುಂದೆ ಕೂಡ ಈ ಚಿಕತ್ಸೆಗೆ ಮುಂದಾಗುತ್ತೇವೆ.
>
> **- ಡಾ.ಕರಣ್ ಹೊಸಮನಿ**
> ಪಶುವೈದ್ಯಾಧಿಕಾರಿ ಶಸ್ತ್ರತಜ್ಞ

# ಹರ್ ಘರ್ ತಿರಂಗಾ ಅಭಿಯಾನ, ಆ.12 ರಂದು ತಿಂಗಳ ಸೊಬಗು ಸಾಂಸ್ಕೃತಿಕ ಕಾರ್ಯಕ್ರಮ

## ರಾಮಾಯಣ ಬಯಲಾಟ | ಸಾರ್ವಜನಿಕರು ಭಾಗವಹಿಸಲು ಮುಕ್ತ ಅವಕಾಶ

■ ಹಂಪಿ ಟೈಮ್ಸ್ ಬಳ್ಳಾರಿ

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಸಾಂಸ್ಕೃತಿಕ ಸಮುಚ್ಛಯ ನಿರ್ವಹಣಾ ಸಮಿತಿ ಇವರ ಸಂಯುಕ್ತಾಶ್ರಯದಲ್ಲಿ ಹರ್ ಘರ್ ತಿರಂಗಾ-2024 ಅಭಿಯಾನ ಅಂಗವಾಗಿ ಆ.12 ರಂದು ಸಂಜೆ 6.30 ಗಂಟೆಗೆ ನಗರದ ಡಾ.ರಾಜ್‌ಕುಮಾರ್ ರಸ್ತೆಯ ನಾಡೋಜ ಮನ್ಸೂರ್ ಬಯಲು ರಂಗಮಂದಿರದಲ್ಲಿ "ತಿಂಗಳು ಸೊಬಗು" ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗಿದೆ.

ಬಳ್ಳಾರಿಯ ಮೂನ್ ವಾರ್ಕರ್ಸ್ ಸಾಂಸ್ಕೃತಿಕ ಕಲಾ ಸಂಘದ ವತಿಯಿಂದ ದೇಶಭಕ್ತಿ ಗೀತೆಗಳ ಸಮೂಹ ನೃತ್ಯ ಹಾಗೂ ಬಳ್ಳಾರಿ ತಾಲ್ಲೂಕಿನ ಶಂಕರಬಂಡೆ ಗ್ರಾಮದ ಪಿ.ಸಣ್ಣ ಹೊನ್ನೂರ್‌ಸಾಬ್ ಮತ್ತು ಸಂಗಡಿಗರ ವತಿಯಿಂದ ರಾಮಾಯಣ ಬಯಲಾಟ ಸನ್ನಿವೇಶಗಳ ಕುರಿತು ನಾಟಕ ಕಾರ್ಯಕ್ರಮ ಇರಲಿದೆ.

ಸಾರ್ವಜನಿಕರು ಭಾಗವಹಿಸಲು ಮುಕ್ತ ಅವಕಾಶ ಕಲ್ಪಿಸಲಾಗಿದೆ ಎಂದು ಜಿಲ್ಲಾಡಳಿತ ಪ್ರಕಟಣೆ ತಿಳಿಸಿದೆ.


ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನಪತ್ರಿಕೆ
scan to read

ಸಮಾನ ಶಿಕ್ಷಣ ಅವಕಾಶ ಅಂಕ

ಕನ್ನಡ ಮಕ್ಕಳ ಶೈಕ್ಷಣಿಕ ಪ್ರಗತಿ, ಸರ್ಕಾರಿ ಶಾಲೆಗಳ ಸಂರಕ್ಷಣೆ ಮತ್ತು ಪ್ರಗತಿಗಾಗಿ
ವಾರಕ್ಕೆ ಒಂದು ಗಂಟೆ ಸೇವೆ ಮಾಡಲಿಚ್ಛಿಸುವ ಉತ್ಸಾಹಿ ನಿವೃತ್ತ ನೌಕರರು ನಮ್ಮೊಂದಿಗೆ ಕೈಜೋಡಿಸಿ...

ಸಮಾನ ಶಿಕ್ಷಣ ಸಮಾನ ಅವಕಾಶಗಳಿರುವಾಗ ಮಕ್ಕಳು ಸಮಾನ ಅಂಕಗಳೇಕೆ ಗಳಿಸಬಾರದು ಅಲ್ಲವೇ?
ಬನ್ನಿ ಮಕ್ಕಳಲ್ಲಿರುವ ಕುಂದುಕೊರತೆಗೆ ಪರಿಹಾರ ಸೂಚಿಸಿ, ಸೂಕ್ತ ಮಾರ್ಗದರ್ಶನ ಮಾಡಿ, ಮಕ್ಕಳ ಶಿಕ್ಷಣವನ್ನು ಬಲಪಡಿಸಿ, ಶಿಕ್ಷಕರಿಗೆ ನೆರವಾಗೋಣ...

ಇಂದಿನ ಮಕ್ಕಳೇ ನಮ್ಮ ಭವಿಷ್ಯದ ಪ್ರಜೆಗಳು. ಅವರು ನಮ್ಮ ಸಮಾಜದ ಮತ್ತು ದೇಶದ ಮುಂದಿನ ನಾಯಕರು, ವಿಜ್ಞಾನಿಗಳು, ಶಿಕ್ಷಕರು, ಮತ್ತು ಬದಲಾವಣೆಯ ಹರಿಕಾರರು. ಆದ್ದರಿಂದ, ಮಕ್ಕಳ ಸಕಾಲಿಕ ಮತ್ತು ಸಮಗ್ರ ಶಿಕ್ಷಣವು ಬಹಳ ಮುಖ್ಯವಾಗಿದೆ

ಶಾಲೆಯತ್ತ ಸಮುದಾಯದ ನಡಿಗೆ
ಇಂದಿನ ಮಕ್ಕಳಿಗೆ ಸಮಗ್ರ ಮತ್ತು ಗುಣಮಟ್ಟದ ಶಿಕ್ಷಣ ಒದಗಿಸಲು ನಾವು ಸಾಮೂಹಿಕವಾಗಿ ಪ್ರಯತ್ನಿಸೋಣ

ನಿಮ್ಮ ಹೆಸರು, ಊರು, ಸೇವಾಕ್ಷೇತ್ರ, ನಿಮ್ಮ ವಿಳಾಸದೊಂದಿಗೆ ನಿಮ್ಮ ಭಾವಚಿತ್ರವನ್ನು 94486 33038 ಗೆ ವಾಟ್ಸಪ್ ಮಾಡಿರಿ.

ಹಂಪಿ ಟೈಮ್ಸ್ ಬಳಗ
ಶ್ರೀ ಓಂಕಾರೇಶ್ವರ ಗುಡಿ ಹತ್ತಿರ, ವಾಲ್ಮೀಕಿ ಸರ್ಕಲ್, ಹೊಸಪೇಟೆ-583201, ವಿಜಯನಗರ ಜಿಲ್ಲೆ


# ಸರ್ಕಾರಿ ಕಾರ್ಯಕ್ರಮದ ಬ್ಯಾನರ್‌ನಲ್ಲಿ ಶಾಸಕ ಎಚ್.ಆರ್.ಜಿ. ಪುತ್ರರ ಚಿತ್ರ

## ಶಿಷ್ಟಾಚಾರ ಉಲ್ಲಂಘಿಸಿ ನಡೆಸಿದ ಕಾರ್ಯಕ್ರಮದ ಫೋಟೋಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್

■ ಹಂಪಿ ಟೈಮ್ಸ್ ಹೊಸಪೇಟೆ

ಶಾಸಕ ಎಚ್.ಆರ್.ಗವಿಯಪ್ಪನವರ ಇಬ್ಬರು ಪುತ್ರರು ಸಾಂವಿಧಾನಿಕವಾಗಿ ಯಾವುದೇ ಹುದ್ದೆಯಲ್ಲಿ ಇಲ್ಲದಿದ್ದರೂ ಸರ್ಕಾರಿ ಕಾರ್ಯಕ್ರಮದ ಬ್ಯಾನರ್‌ನಲ್ಲಿ ಅವರ ಭಾವಚಿತ್ರಗಳನ್ನು ಮುದ್ರಿಸಿರುವ ಅಧಿಕಾರಿಗಳ ವಿರುದ್ಧ ಸಾರ್ವಜನಿಕ ವಲಯದಲ್ಲಿ ಟೀಕೆಗಳು, ಆಕ್ರೋಶ ವ್ಯಕ್ತವಾಗಿವೆ.

ಕೃಷಿ ಮಾರಾಟ ಇಲಾಖೆಯಿಂದ ಹೊಸಪೇಟೆ ನಗರದ ಎಪಿಎಂಸಿ ಪ್ರಾಂಗಣದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಸಿಸಿ ರಸ್ತೆ ಭೂಮಿ ಪೂಜೆ ಕಾರ್ಯಕ್ರಮದ ಬ್ಯಾನರ್‌ನಲ್ಲಿ ಶಾಸಕ ಎಚ್.ಆರ್.ಗವಿಯಪ್ಪ ಜೊತೆಗೆ ಅವರ ಇಬ್ಬರು ಪುತ್ರರ ಫೋಟೋ ರಾರಾಜಿಸಿದ್ದು ಸಾರ್ವಜನಿಕರ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ.




2023-24ನೇ ಸಾಲಿನ ಆರ್‌ಐಡಿಎಫ್-29 ಯೋಜನೆಯಡಿ 1.91 ಕೋಟಿ ರೂ. ಮೊತ್ತದಲ್ಲಿ ಕೈಗೊಂಡಿದ್ದ ಸಿಸಿ ರಸ್ತೆ ಕಾಮಗಾರಿಗೆ ಶಾಸಕ ಎಚ್.ಆರ್. ಗವಿಯಪ್ಪ ಭೂಮಿ ಪೂಜೆ ನೆರವೇರಿಸಿದರು.

ಕಾರ್ಯಕ್ರಮದ ವೇದಿಕೆಯಲ್ಲಿ ಅಳವಡಿಸಿದ್ದ ಬೃಹತ್ ಬ್ಯಾನರ್‌ನಲ್ಲಿ ಕರ್ನಾಟಕ ಸರ್ಕಾರ, ಹೊಸಪೇಟೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಹಾಗೂ ಕಾಮಗಾರಿ ವಿವರಗಳ ಜೊತೆಗೆ ಶಾಸಕ ಎಚ್.ಆರ್. ಗವಿಯಪ್ಪ, ಅವರ ಪುತ್ರರಾದ ಎಚ್.ಜಿ ಗುರುದತ್ತ, ಎಚ್.ಜಿ.ವಿರೂಪಾಕ್ಷ ಅವರ ಫೋಟೋಗಳನ್ನೂ ಮುದ್ರಿಸಲಾಗಿದೆ. ಶಿಷ್ಟಾಚಾರ ಉಲ್ಲಂಘಿಸಿ ನಡೆಸಿದ ಕಾರ್ಯಕ್ರಮದ ಫೋಟೋಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದ್ದರಿಂದ ಎಪಿಎಂಸಿ ಅಧಿಕಾರಿಗಳ ವಿರುದ್ಧ ಮೇಲಾಧಿಕಾರಿಗಳೂ ಗರಂ ಆಗಿದ್ದಾರೆ ಎನ್ನಲಾಗಿದೆ. ಶಿಷ್ಟಾಚಾರದ ಬಗ್ಗೆ ಶಾಸಕರ ಬೆಂಬಲಿಗರಿಗೆ ತಿಳಿಸಿದರೂ, ಅವರು ಕಿವಿಗೊಡಲಿಲ್ಲ ಎಂದು ಕೆಳ ಹಂತದ ಅಧಿಕಾರಿಗಳು ಅಸಹಾಯಕತೆ ತೋಡಿಕೊಂಡಿದ್ದಾರೆ.

# ವಿಜ್ಞಾನ

## ನೆಲಹಾಸಿನ ಮೇಲೆ ಹುಳಿ ಬಿದ್ದಾಗ ಏಕೆ ಕಲೆಗಳು ಉಂಟಾಗುತ್ತವೆ?

■ ಆರ್.ಬಿ.ಗುರುಬಸವರಾಜ

ಪೇಟೆಯಿಂದ ತಂದ ಮಾವಿನ ಕಾಯಿಗಳನ್ನು ಉಪ್ಪಿನಕಾಯಿ ಮಾಡಲು ಅಮ್ಮ ಹೆಚ್ಚುತ್ತಿದ್ದಳು. ಚಿಕ್ಕ ಚಿಕ್ಕ ಹೋಳುಗಳನ್ನು ಕತ್ತರಿಸಿ ಒಂದು ದೊಡ್ಡ ಬೊಗಣೆಯಲ್ಲಿ ಹಾಕಿದ್ದಳು. ಹೆಚ್ಚುವಾಗ ನೆಲಹಾಸಿನ ಮೇಲೆ ಒಂದು ಬಟ್ಟೆ ಹಾಕಿಕೊಂಡಿದ್ದನ್ನು ಗಮನಿಸಿದಳು ಲಕ್ಷ್ಮಿ. "ಅಮ್ಮಾ, ಈಳಿಗೆಯ ಕೆಳಗೆ ಈ ಬಟ್ಟೆಯನ್ನು ಏಕೆ ಹಾಕಿಕೊಂಡಿರುವೆ?" ಎಂದಳು. 'ಇದನ್ನು ಹಾಕಿಕೊಳ್ಳದೇ ಹೆಚ್ಚಿದರೆ ಮಾವಿನ ರಸ ನೆಲದ ಮೇಲೆ ಬಿದ್ದು ಕಲೆಗಳನ್ನು ಉಂಟು ಮಾಡುತ್ತದೆ. ಅದಕ್ಕಾಗಿ ಇದನ್ನು ಹಾಕಿಕೊಂಡಿರುವೆ' ಎಂದಳು ಅಮ್ಮ. "ನೆಲಹಾಸಿನ ಮೇಲೆ ಹುಳಿ ಬಿದ್ದಾಗ ಏಕೆ ಕಲೆಗಳು ಉಂಟಾಗುತ್ತವೆ?" ಎಂದಳು ಲಕ್ಷ್ಮಿ. ಲಕ್ಷ್ಮಿಯ ಪ್ರಶ್ನೆಗೆ ತಾಯಿಯ ಉತ್ತರ ಹೀಗಿದೆ.

ನಿಂಬೆ, ಮಾವು, ಹುಣಸೆ, ಟೊಮಾಟೋ, ದ್ರಾಕ್ಷಿ, ಮೋಸಂಬಿ ಮುಂತಾದ ಹಣ್ಣುಗಳು ಹುಳಿಯಾಗಿದ್ದು ಆಮ್ಲಗಳನ್ನು ಹೊಂದಿರುತ್ತವೆ. ಈ ಆಮ್ಲಗಳು ಕಲ್ಲು ಅಥವಾ ಕಾಂಕ್ರೀಟ್‌ನಂತಹ ಕೆಲವು ನೆಲಹಾಸಿನ ಮೇಲ್ಮೈಗಳೊಂದಿಗೆ ಸಂಪರ್ಕಕ್ಕೆ ಬಂದಾಗ, ಅದರಲ್ಲಿರುವ ಖನಿಜಗಳೊಂದಿಗೆ ಪ್ರತಿಕ್ರಿಯಿಸಿ ರಾಸಾಯನಿಕ ಕ್ರಿಯೆ ಉಂಟಾಗುತ್ತದೆ. ರಸಾಯನಿಕ ಕ್ರಿಯೆಯ ಭಾಗವಾಗಿ ಬಿಳಿ ಕಲೆಗಳು ಉಂಟಾಗುತ್ತವೆ.



ಆಮ್ಲವು ಅಮೃತಶಿಲೆ, ಸುಣ್ಣದ ಕಲ್ಲು ಅಥವಾ ಟ್ರಾವರ್ಟೈನ್‌ನಂತಹ ಕೆಲವು ವಿಧದನೆಲಹಾಸಿನಕಲ್ಲಿನಲ್ಲಿರುವಕ್ಯಾಲ್ಸಿಯಂಕಾರ್ಬೋನೇಟ್‌ನೊಂದಿಗೆ ಪ್ರತಿಕ್ರಿಯಿಸುತ್ತದೆ. ಕ್ಯಾಲ್ಸಿಯಂ ಕಾರ್ಬೋನೇಟ್ ಕಲ್ಲಿನ ಪ್ರಮುಖ ಅಂಶವಾಗಿದೆ. ಇದು ಆಮ್ಲದೊಂದಿಗೆ ಸಂಪರ್ಕಕ್ಕೆ ಬಂದಾಗ ಕರಗುತ್ತದೆ ಮತ್ತು ತಿಳಿ ಬಿಳಿ ಬಣ್ಣದ ಕಲೆ ಗುರುತು ರಚಿಸುತ್ತದೆ. ಇದು ವಾಸ್ತವವಾಗಿ ಕಲ್ಲಿನ ಮೇಲ್ಮೈ ಹಾನಿಗೊಳಗಾದ ಪರಿಣಾಮವಾಗಿದೆ. ನಿಂಬೆರಸವು ಉಳಿದ ಹುಳಿ ಆಮ್ಲಗಳಿಗಿಂತ ಬೇಗನೇ ಕಲೆಗಳನ್ನು ಉಂಟುಮಾಡುತ್ತದೆ. ಏಕೆಂದರೆ ಇದರಲ್ಲಿರುವ ಸಿಟ್ರಿಕ್ ಆಮ್ಲದ ಸಾಂದ್ರತೆ ಇತರೆ ಹುಳಿ ಆಮ್ಲಗಳಿಗಿಂತ ಹೆಚ್ಚು ಇರುತ್ತದೆ. ನೆಲದ ಮೇಲೆ ಮೂಡುವ ಕಲೆಯು ಹುಳಿಯ ಗುಣಮಟ್ಟ ಮತ್ತು ಸಾಂದ್ರತೆಯನ್ನು ಅವಲಂಬಿಸಿರುತ್ತದೆ. ಹುಳಿ ಬಿದ್ದು ಉಂಟಾಗುವ ಕಲೆಗಳನ್ನು ತೆಗೆಯುವುದು ಒಂದಿಷ್ಟು ತ್ರಾಸದಾಯಕ ಕೆಲಸ. ಆದ್ದರಿಂದ ಹುಳಿಬೀಳದಂತೆ ಎಚ್ಚರಿಕೆ ವಹಿಸಬೇಕು. ಒಂದು ವೇಳೆ ಬಿದ್ದರೂ ತಕ್ಷಣವೇ ಒದ್ದೆ ಬಟ್ಟೆಯಿಂದ ಉಜ್ಜಿ ಹುಳಿಯನ್ನು ತೆಗೆಯಬೇಕು.

## ಮಕ್ಕಳು ಅರಸರಾಗಬೇಕೆ?

**ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?**

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**

**– ಜಾಹೀರಾತು ವ್ಯವಸ್ಥಾಪಕರು.**

# ಮನದ ಕೊಳೆ ಕಳೆದ ಕ್ಷಣ

ಗಂಗಾಧರನಿಗೆ ಕಳೆದ ಎಂಟು ದಿನಗಳಿಂದ ಆಸ್ಪತ್ರೆ ಮತ್ತು ಮನೆಗೆ ಓಡಾಡಿ ಸಾಕಾಗಿತ್ತು. ಕಾಲು ಜಾರಿ ಬಿದ್ದದ್ದು ಒಂದೇ ನೆಪವಾಗಿ ಪತ್ನಿ ಗಿರಿಜಾ ಅವರಿಗೆ ಕಾಲಿನ ಆಪರೇಷನ್ ಆಗಿ ಆಸ್ಪತ್ರೆಯಲ್ಲಿ ದಾಖಲಾಗಿದ್ದರಿಂದ ಮನೆ, ಕೆಲಸ, ಆಫೀಸು ಕೆಲಸದ ಓಡಾಟಗಳಲ್ಲಿ ಗಂಗಾಧರ್ ಸುಸ್ತಾಗಿ ಹೋಗಿದ್ದರು. ಇಂದು ಪತ್ನಿ ಗಿರಿಜಾ ಅವರನ್ನು ಆಸ್ಪತ್ರೆಯಿಂದ ಮನೆಗೆ ಕರೆತಂದು ತಮ್ಮ ಕೋಣೆಯ ಹಾಸಿಗೆಯ ಮೇಲೆ ಮಲಗಿಸಿದ ಅವರು ತುಸು ನಿರಾಳ ಭಾವದಿಂದ ಸೋಫಾದ ಮೇಲೆ ಕುಳಿತರು.

ತಮ್ಮ ತಂದೆ ತಾಯಿಗೆ ಒಬ್ಬರೇ ಮಗನಾಗಿದ್ದ ಗಂಗಾಧರ್ ಮದುವೆಯಾಗಿದ್ದ ಗಿರಿಜಾ ಅವರು ಕೂಡ ಅವರ ಪಾಲಕರಿಗೆ ಒಬ್ಬಳೇ ಮಗಳು. ಗಿರಿಜಾ ಅವರಿಗೆ ಕಾಲುಮುರಿದಾಗ ಆಕೆಯ ತಂದೆ ತಾಯಿ ಇದೇ ಮೊದಲ ಬಾರಿಗೆ ತಮ್ಮ ಸ್ನೇಹಿತರೊಡಗೂಡಿ ಉತ್ತರ ಭಾರತ ಪ್ರವಾಸಕ್ಕೆ ಹಿಂದಿನ ದಿನ ತಾನೇ ಹೊರಟಿದ್ದರು.ಅವರಿಗೆ ವಿಷಯ ತಿಳಿಸಿ ಅವರು ಗಾಬರಿಯಿಂದ ಪ್ರವಾಸವನ್ನು ಮೊಟಕುಗೊಳಿಸಿ ಬರುವುದು ಬೇಡ ಎಂದು ಗಿರಿಜಾ ನೋವಿನಲ್ಲಿಯೂ ಬೇಡಿಕೊಂಡಾಗ ಗಂಗಾಧರ್ ಅರೆ ಮನಸ್ಸಿನಿಂದಲೇ ಒಪ್ಪಿದರು. ಇತ್ತ ಗಂಗಾಧರ್ ಅವರ ತಾಯಿ ಕೂಡ ತಮ್ಮ ಹೊಲದಲ್ಲಿ ಬಿತ್ತನೆ ಕಾರ್ಯಗಳು ಆರಂಭವಾಗಿರುವುದರಿಂದ ತನಗೆ ಬರಲಾಗುವುದಿಲ್ಲ ಎಂದೂ, ಬಿತ್ತನೆ ಕೆಲಸ ಮುಗಿದ ಕೂಡಲೇ ಬರುವುದಾಗಿ ಅಲ್ಲಿಯವರೆಗೂ ಸಂಭಾಳಿಸು ಎಂದು ತಮಗೆ ಕರೆ ಮಾಡಿದ ಮಗನಿಗೆ ಹೇಳಿದ್ದರು.



ಸೋಫಾದಲ್ಲಿ ಕುಳಿತ ಗಂಗಾಧರ್ ಮೆಲ್ಲನೆ ತಮ್ಮ ತಲೆಯನ್ನು ಸೋಫಾದ ಹಿಂಬದಿಗೆ ಆನಿಸಿ ಕಣ್ಣು ಮುಚ್ಚಿದರು... ಮನಃಪಟಲದಲ್ಲಿ ಕಳೆದ ದಿನಗಳ ನೆನಪು ಆವರಿಸಿತು. ಸ್ವಭಾವತಃ ತುಸು ಶಿಸ್ತಿನ ಮನುಷ್ಯನಾದ ಗಂಗಾಧರ ಮನೆಯಲ್ಲಿ ಎಲ್ಲವೂ ವ್ಯವಸ್ಥಿತವಾಗಿರಲಿ ಎಂದು ಬಯಸುವ ವ್ಯಕ್ತಿ. ಆದರೆ ತಾನು ಇತ್ತಲಿದ್ದ ಒಂದು ಕಡ್ಡಿಯನ್ನು ಅತ್ತ ತೆಗೆದು ಇಡುತ್ತಿರಲಿಲ್ಲವಾದರೂ ಮನೆಯ ವಸ್ತುಗಳು ಚೂರು ಏರುಪೇರಾದರೂ ಹೆಂಡತಿ ಮಕ್ಕಳ ಮೇಲೆ ಎಗ್ಗಿಲ್ಲದೆ ರೇಗುವಾತ. ಪತ್ನಿ ಗಿರಿಜಾ ಗಂಡನಿಗೆ ಪ್ರತ್ಯುತ್ತರ ನೀಡದೆ ಎಲ್ಲವನ್ನು ಸಂಭಾಳಿಸಿಕೊಂಡು ಹೋಗುವ ಸಮಾಧಾನಿ.

ಮಕ್ಕಳು ಓದಲೆಂದು ಹೊರ ಊರಿಗೆ ಹೋದ ಮೇಲೆ ಮನೆಯಲ್ಲಿ ಗಂಡ ಹೆಂಡತಿ ಇಬ್ಬರೇ. ಯಾವುದಕ್ಕೂ ವಾದ ಮಾಡದ ಪತ್ನಿ ಗಿರಿಜಾಳನ್ನು ಪದವೀಧರೆಯಾದರೂ ಹಳ್ಳಿ ಗುಗ್ಗು ಎಂಬಂತೆ ಗಂಗಾಧರ ವರ್ತಿಸುತ್ತಿದ್ದ. ಆರಂಕಿ ಸಂಬಳ ಪಡೆಯುತ್ತಿದ್ದ ಸಾಫ್ಟ್ವೇರ್ ಇಂಜಿನಿಯರ್ ಗಂಗಾಧರ್ ಮನೆಯ ಹೊರಗೆಲಸಗಳಾದ ಬಟ್ಟೆ, ಪಾತ್ರೆ, ಕಸ ಒರೆಸಲು ಕೂಡ ಆಳುಗಳನ್ನಿಡದೇ ಎಲ್ಲವೂ ಪತ್ನಿಯೇ ಮಾಡಲಿ ಎಂದು ಆಶಿಸುತ್ತಿದ್ದ. ಇದಕ್ಕೆ ಗಿರಿಜಾರ ಮೌನ ಸಮ್ಮತಿಯೂ ಇತ್ತು.

ಆದರೆ ಈಗ ಬಚ್ಚಲಿನಲ್ಲಿ ಜಾರಿ ಕಾಲು ಮುರಿದುಕೊಂಡ ಗಿರಿಜಾ ಕಳೆದ ಎಂಟು ದಿನಗಳಿಂದ ಆಸ್ಪತ್ರೆಯಲ್ಲಿ ಉಳಿದು ಹೋದಾಗ, ಶಿಸ್ತನ್ನು ಬಯಸುತ್ತಿದ್ದ ಗಂಗಾಧರ್ ಮನೆಯ ಎಲ್ಲ ಕೆಲಸಗಳನ್ನು ಮಾಡಿ ಮುಗಿಸುವಷ್ಟರಲ್ಲಿ ಸುಸ್ತಾಗಿ ಹೋಗುತ್ತಿದ್ದ. ಊಟವೇನೋ ಹತ್ತಿರದ ಮೆಸ್ ನಿಂದ ಬರುತ್ತಿತ್ತು ನಿಜ, ಆದರೆ ಅಷ್ಟೇನೂ ರುಚಿ ಅಲ್ಲದ, ಮನಸ್ಸಿಗೆ ಹಿತವೆನಿಸದ ಸಪ್ಪೆಯಾದ ಆಹಾರ ಗಂಟಲಲ್ಲಿಳಿಯಲು ಮುಷ್ಕರ ಹೂಡುತ್ತಿದ್ದರೂ ವಿಧಿ ಇಲ್ಲದೆ ಸೇವಿಸುತ್ತಿದ್ದ ಗಂಗಾಧರನ ಪಾಡು ಹೇಳತೀರದು.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ಬಚ್ಚಲು ಮನೆ ಲಕ ಲಕ ಹೊಳೆಯಬೇಕು ಎಂದು ಪತ್ನಿಯ ಮೇಲೆ ಹಾರಾಡುತ್ತಿದ್ದ ಗಂಗಾಧರ್ ಕಳೆದ ಎಂಟು ದಿನಗಳಿಂದ ಬಚ್ಚಲು ಮನೆಯನ್ನು ಸ್ವಚ್ಛ ಮಾಡುವ ಗೋಜಿಗೆ ಹೋಗಿರಲಿಲ್ಲ. ಆತ ಒಬ್ಬನೇ ಬಳಸಿದರೂ ಅಲ್ಲಲ್ಲಿ ಕಲೆಗಳಾಗಿ ಸೋಪಿನ ನೊರೆಗಟ್ಟಿದ ಬಚ್ಚಲು, ಹಳದಿಗಟ್ಟಿದ ಕಮೋಡ್ ಆತನನ್ನು ಕೆಣಕುತ್ತಿತ್ತು.ಇದೀಗ ಪತ್ನಿಯ ಅನಾರೋಗ್ಯದಿಂದ ಕೆಲಸಕ್ಕೆ ಆಳನ್ನು ಹುಡುಕಲಾರಂಭಿಸಿದ ಗಂಗಾಧರ್ ಗೆ ಇದುವರೆಗೂ ಆಳು ಸಿಕ್ಕದೆ ಹೋಗಿದ್ದು ಆತನ ಅಸಹನೆ ಮತ್ತಷ್ಟು ಹೆಚ್ಚಿತ್ತು.

ಔಷಧಿಯ ಪ್ರಭಾವಕ್ಕೆ ನಿದ್ದೆ ಹೋಗಿದ್ದಳು ಗಿರಿಜಾ. ಮುಂದಿನ ಕೆಲಸಗಳ ನೆನಪಾಗಿ ಅನಿವಾರ್ಯವಾಗಿ ಮೇಲೆದ್ದ ಗಂಗಾಧರ ಇಡೀ ಮನೆಯ ಕಸ ಗುಡಿಸಿ ನೆಲವನ್ನು ಮಾಪ್ನಿಂದ ಒರೆಸಿದ. ಅಡುಗೆ ಮನೆ ಬಚ್ಚಲಿನಲ್ಲಿದ್ದ ಒಂದೆರಡು ತಟ್ಟೆ, ಬಟ್ಟಲು, ಕಾಫಿಯ ಡಬರಿಗಳನ್ನು ತೊಳೆದು ಕಾಫಿ ಮಾಡಿಕೊಂಡು ಒಂದೆರಡು ಬಿಸ್ಕತ್ತಿನೊಂದಿಗೆ ಬಾಲ್ಕನಿಗೆ ಬಂದು ನಿಧಾನವಾಗಿ ಕಾಫಿಯನ್ನು ಹೀರಿದ ಆತನಿಗೆ ತಾಯಿ ಸದಾ ಹೇಳುತ್ತಿದ್ದ ಮಾತುಗಳು ನೆನಪಾದವು" ಗಂಗೂ, ಗಿರಿಜಾ ಬಹಳ ಸಮಾಧಾನದ ಹುಡುಗಿ. ನಿನ್ನ ಎಲ್ಲಾ ಮುನಿಸು, ಮೊಂಡಾಟಗಳನ್ನು ಸಹಿಸಿಕೊಂಡು ಇಡೀ ಮನೆಯನ್ನು ತೂಗಿಸಿಕೊಂಡು ಹೋಗುವ ಮಹಾಲಕ್ಷ್ಮಿ. ನೀನಂತೂ ಆಕೆಗೆ ಯಾವ ಸಹಾಯವನ್ನು ಮಾಡುವುದಿಲ್ಲ, ಆಕೆಗೂ ಮೊದಲಿನಂತೆ ಎಲ್ಲ ಕೆಲಸಗಳು ನೀಗುವುದಿಲ್ಲ... ಈಗಲಾದರೂ ಕೆಲಸಕ್ಕೆ ಆಳುಗಳನ್ನು ಹೊಂದಿಸು, ಆಕೆಯೊಂದಿಗೆ ಪ್ರೀತಿಯಿಂದ ನಡೆದುಕೋ, ನಾಲ್ಕು ಜನರೊಂದಿಗೆ ಬೆರೆಯಲು ಬಿಡು, ರಜಾ ದಿನಗಳಲ್ಲಿ ಕರೆದು ಹೊರಗೆ ಕರೆದುಕೊಂಡು ಸುತ್ತಾಡು, ಆಕೆಗೂ ತನ್ನ ವೈಯುಕ್ತಿಕ ಹವ್ಯಾಸಗಳನ್ನು ಮುಂದುವರೆಸಲು ಅನುವು ಮಾಡಿಕೊಡು ಎಂದು ಸೊಸೆಯ ಮೌನದ ಹಿಂದಿನ ಭಾವವನ್ನು ಅರಿತ ಅನುಭವಸ್ಥ ತಾಯಿ ಹೇಳಿದಾಗ ತುಸು ತಾತ್ಸಾರದಿಂದಲೇ ತಲೆಯಾಡಿಸಿದ್ದು ನೆನಪಾಯಿತು.

ಹೌದಲ್ಲವೇ! ಮದುವೆಗೆ ಮುಂಚೆ ತುಂಬಾ ಭಾವಪೂರ್ಣವಾಗಿ ಹಾಡುತ್ತಿದ್ದ, ಸಣ್ಣ ಪುಟ್ಟ ಕಥೆ ಕವನಗಳನ್ನು ಬರೆಯುತ್ತಿದ್ದ ಪತ್ನಿ ಗಿರಿಜಾ ಭರತನಾಟ್ಯದಲ್ಲಿ ಜೂನಿಯರ್ ಪರೀಕ್ಷೆ ಪಾಸ್ ಆಗಿದ್ದಳು ಕೂಡ. ಆದರೆ ಮನೆ ಕೆಲಸಗಳ ಒತ್ತಡ, ಮಕ್ಕಳ ಬೆಳೆಸುವಿಕೆ, ತನ್ನ ವಿಪರೀತ ಶಿಸ್ತಿನ ಜೀವನ ಶೈಲಿಗಳ ನಡುವೆ ಬಳಲಿದ ಆಕೆ ಯಾವಾಗ ಮೌನದ ಮೊರೆ ಹೊಕ್ಕಳೋ ತಿಳಿಯದೆ ಹೋಯಿತು, ಮಕ್ಕಳಿದ್ದಾಗ ತುಸು ಗದ್ದಲ ಗಲಾಟೆಯಿಂದ ಕೂಡಿರುತ್ತಿದ್ದ ಮನೆ ಇದೀಗ ತನ್ನ ಬೇಕು ಬೇಡಗಳ ಕೇಳುವಿಕೆಗೆ ಮಾತ್ರ ಸೀಮಿತವಾಗಿದೆ. ಆಫೀಸ್ ನಿಂದ ಬಂದ ಮೇಲೂ ಕೂಡ ತಾನು ಮೊಬೈಲ್ನಲ್ಲಿ ಕಣ್ಣು ಕೀಲಿಸಿ ಕುಳಿತರೆ ಆಕೆಯಾದರೂ ಏನು ಮಾಡಿಯಾಳು? ಮುಚ್ಚಿದ ಕಣ್ಣ ಮುಂದೆ ಒಂದಾದ ಮೇಲೆ ಒಂದರಂತೆ ತಾನು ಮಾಡಿದ ತಪ್ಪುಗಳು ತೆರೆಯ ಮೇಲಿನ ದೃಶ್ಯಗಳಂತೆ ಹಾದುಹೋದವು.... ಕಣ್ಣಂಚಲ್ಲಿ ನೀರ ಹನಿ ಧಾರೆಯಾದರೆ, ಒಂದು ಮಾತು ತಿರುಗಿಯೂ ಹೇಳದೇ ತನ್ನೊಂದಿಗೆ ಇಷ್ಟು ವರ್ಷ ಸಂಸಾರ ಮಾಡಿದ ಹೆಂಡತಿಯ ಕುರಿತು ಅಭಿಮಾನ ಉಕ್ಕಿ ಬಂದಿತು.

ಏನಾದರಾಗಲಿ ಇಂದು ಬಚ್ಚಲು ಸ್ವಚ್ಛ ಮಾಡಿಯೇ ಬಿಡುವೆ ಎಂದು ಮನದಲ್ಲಿ ತೀರ್ಮಾನಿಸಿ ಎದ್ದು ಬಚ್ಚಲಿನತ್ತ ಹೊರಟ ಗಂಗಾಧರ ಕೋಣೆಯಲ್ಲಿ ಇಣುಕಿ ನೋಡಿದರೆ ಮಗ್ಗಲು ಬದಲಿಸಲು ಪರದಾಡುತ್ತಿದ್ದ ಪತ್ನಿಯನ್ನು ನೋಡಿ ನಿಧಾನವಾಗಿ ಆಕೆಯನ್ನು ಮತ್ತೊಂದು ಬದಿಗೆ ಹೊರಳಲು ಸಹಾಯ ಮಾಡಿ ಕುಡಿಯಲು ಏನಾದರೂ ಬೇಕೆ? ಎಂದು ಕೇಳಿದರು. ನೀರನ್ನು ಕೇಳಿ ಪಡೆದ ಗಿರಿಜಾ ಮತ್ತೆ ನಿದ್ದೆಗೆ ಜಾರಿದರು.

ತೊಟ್ಟ ಬಟ್ಟೆಗಳನ್ನು ವಾಷಿಂಗ್ ಮಷೀನ್ ನಲ್ಲಿ ಹಾಕಿದ ಗಂಗಾಧರ್ ಬಚ್ಚಲಿನಲ್ಲಿರುವ ವಾಶ್ ಬೇಸಿನ್, ಕಮೋಡ್ ಮತ್ತು ಬಚ್ಚಲಿಗೆ ಸೋಪಿನ ಪುಡಿ ಮತ್ತು ಲೋಷನ್ ಹಾಕಿ ಕೈಯಾಡಿಸಿದರು. ಕೆಲ ನಿಮಿಷಗಳು ನೆನೆದ ನಂತರ ಒಂದೊಂದಾಗಿ ಬೇಸಿನ್, ಕಮೋಡ್ ಮತ್ತು ಬಚ್ಚಲುಗಳನ್ನು ಅಲ್ಲಿಯೇ ಇಟ್ಟಿದ್ದ ಬೇರೆ ಬೇರೆ ಬ್ರಷ್ಗಳಿಂದ ತಿಕ್ಕಿ ತಿಕ್ಕಿ ತೊಳೆದರು.

ಇದುವರೆಗೂ ತಾನು ಪತ್ನಿಯೊಂದಿಗೆ ನಡೆದುಕೊಂಡ ರೀತಿ, ಆಕೆಯನ್ನು ಮಾತು ಮಾತಿಗೂ ಹಂಗಿಸುತ್ತಿದ್ದ ಬಗೆ ಮುಂತಾದ ಎಲ್ಲ ವಿಷಯಗಳು ನೆನಪಾಗಿ ಇನ್ನು ಮುಂದೆ ಹಾಗೆ ವರ್ತಿಸದೆ ಪತ್ನಿಯೊಂದಿಗೆ ಪ್ರೀತಿ ವಿಶ್ವಾಸದಿಂದ ನಡೆದುಕೊಳ್ಳುವುದಾಗಿ ಮನ ತೀರ್ಮಾನಿಸಿದಾಗ ಇಡೀ ಬಚ್ಚಲನ್ನು ನೀರು ಹಾಕಿ ತೊಳೆದಂತೆ ತಮ್ಮ ಮನದ ಕಲ್ಮಶವನ್ನು ಕೂಡ ಸ್ವಚ್ಛವಾಗಿ ತೊಳೆದು ಚರಂಡಿಯತ್ತ ಹರಿಬಿಟ್ಟರು.

ಸ್ವಚ್ಛ ಶುಭ್ರವಾದ ಬಚ್ಚಲು ಪುರುಷಾಹಂಕಾರದ ಕೊಳೆಯನ್ನು ಕಳೆದುಕೊಂಡ ಗಂಗಾಧರರ ಮನಸ್ಥಿತಿಯನ್ನು ಬಿಂಬಿಸುತ್ತಿತ್ತು. ಸ್ನಾನ ಮಾಡಿ ಹೊರಬಂದ ಗಂಗಾಧರ್ ಮುಖದಲ್ಲಿನ ಮಂದಹಾಸವನ್ನು ನೋಡಿದ ಪತ್ನಿ ಗಿರಿಜಾ ಬೆರಗಾದರು. ಔಷಧಿಯ ಪ್ರಭಾವದ ಮಬ್ಬನ್ನು ಕಳೆದುಕೊಂಡ ಗಿರಿಜಾ, ಮೇಲ್ ಇಗೋ ಕಳೆದುಕೊಂಡ ಗಂಗಾಧರ ಪರಸ್ಪರ ದಿಟ್ಟಿಸಿ ನೋಡಿದರು.

ಮುಂದಿನ 15 ದಿನಗಳ ಕಾಲ ವರ್ಕ್ ಫ್ರಮ್ ಹೋಂ ತೆಗೆದುಕೊಂಡ ಗಂಗಾಧರ ಗೆ ಮನೆ ಕೆಲಸಕ್ಕೆ,ಅಡುಗೆ ಕೆಲಸಕ್ಕೆ ಕೂಡ ಸಹಾಯಕರು ದೊರೆತರು. ಆದರೂ ಇಷ್ಟು ವರ್ಷಗಳ ಕಾಲ ತಾನು ಮಾಡಿದ ತಪ್ಪಿಗೆ ಪಶ್ಚಾತಾಪದ ರೂಪದಲ್ಲಿ ಪತ್ನಿಯ ಎಲ್ಲಾ ಕೆಲಸ ಕಾರ್ಯಗಳನ್ನು ತಾವೇ ಮಾಡುತ್ತಿದ್ದರು. ನಗುನಗುತ್ತಾ ಮುಂಜಾನೆಯ ಚಹಾ ಮಾಡಿ ಹೆಂಡತಿಗೆ ತಂದುಕೊಡುತ್ತಿದ್ದ ಗಂಗಾಧರ್ ಕೆಲಸದ ನಡುವೆ ಬಿಡುವು ಮಾಡಿಕೊಂಡು ಹೆಂಡತಿಯನ್ನು ಮಾತನಾಡಿಸುತ್ತಾ, ಆಕೆಯ ಬೇಕು ಬೇಡಗಳಿಗೆ ಸ್ಪಂದಿಸುತ್ತಿದ್ದರು. ಗಂಡನ ಬದಲಾದ ಮನಸ್ಥಿತಿಯನ್ನು ನೋಡಿ ಸಮಾಧಾನಗೊಂಡ ಗಿರಿಜಾ ಇದೀಗ ಮೆಲ್ಲನೆ ಮನ ಬಿಚ್ಚಿ ಮಾತನಾಡತೊಡಗಿದಳು.

ಮುಂದಿನ ಬೆಳವಣಿಗೆಯಲ್ಲಿ ಅಪಾರ್ಟ್ಮೆಂಟ್ ನಲ್ಲಿ ನಡೆಯುವ ಹೊಸ ವರ್ಷದ ಕಾರ್ಯಕ್ರಮದಲ್ಲಿ ಭರತನಾಟ್ಯದ ಉಡುಪು ತೊಟ್ಟು ಗಿರಿಜಾ ಪ್ರದರ್ಶನ ನೀಡಿದಾಗ ಪ್ರೇಕ್ಷಕರ ಮಧ್ಯ ಕುಳಿತ ಗಂಗಾಧರ್ ಅವರ ತಾಯಿ ತಂದೆ, ಗಿರಿಜಾ ಅವರ ಅಪ್ಪ ಅಮ್ಮ, ಅವರಿಬ್ಬರ ಪ್ರೀತಿಯ ಮಕ್ಕಳು ಖುಷಿಯಿಂದ ಚಪ್ಪಾಳೆ ತಟ್ಟಿದರೆ ಗಂಗಾಧರ ಮನದುಂಬಿ ಹರ್ಷಿಸಿದರು. ಇಬ್ಬರ ಮುಂದಿನ ಜೀವನ, ಆಯಿತು ಸುಖದ ಸೋಪಾನ.

# ಬದುಕು ಮೂರುದಿನ-ಹೊಂದಾಣಿಕೆಯಲ್ಲಿರಲಿ ಅರ್ಥಪೂರ್ಣ

■ ಡಾ. ರಾಜಶೇಖರ ಜಮದಂಡಿ




ಕಾಣದ ಶಕ್ತಿ(ದೇವರಿ)ಗೆ ಭಕ್ತಿಯಿಂದ ಪ್ರಾರ್ಥನೆ ಮಾಡಿ ಒಲಿಸಿಕೊಳ್ಳುವಂತೆ, ಕಾಣುವ ಬದುಕನ್ನು ಸಮರ್ಥವಾದ ರೀತಿಯಲ್ಲಿ ಪಳಗಿಸಿಕೊಳ್ಳಬೇಕೆಂದು ಆಧ್ಯಾತ್ಮ ಚಿಂತಕರು ತಿಳಿ ಹೇಳಿದ್ದಾರೆ. ಅನುಭಾವಿಗಳು ಹೇಳಿದಂತೆ ಬದುಕೆಂಬ ಮೂರುದಿನದ ಸಂತೆಯಲ್ಲಿ ಬಂಧುಗಳೊಡನೆ, ಸ್ನೇಹಿತರೊಡನೆ, ಅಕ್ಕಪಕ್ಕದವರೊಡನೆ ಅರ್ಥಪೂರ್ಣವಾಗಿ ಅನುಸರಿಸಿಕೊಂಡು ಹೋಗಬೇಕು. 'ಜಾತಸ್ಯ ಮರಣಂ ಧ್ರುವಂ' ಆಕಸ್ಮಿಕವಾಗಿ ಭುವಿಗೆ ಮನುಷ್ಯರಾಗಿ ಬಂದಿದ್ದೇವೆ ಆಕಸ್ಮಿಕವಾಗಿ ಕೊನೆಗೆ ಹೋಗುತ್ತೇವೆ. ಈ ಕೊನೆಯವರೆಗೆ ಕೈಲಾದಷ್ಟು ಏನಾದರೊಂದು ಕೆಲಸಕಾರ್ಯ, ಸಹಾಯ ಅಥವಾ ಪರೋಪಕಾರ್ಯಗಳನ್ನು ಮಾಡುತ್ತಿರಬೇಕು. ಭಗವದ್ಗೀತೆಯಲ್ಲಿ ಶ್ರೀ ಕೃಷ್ಣಪರಮಾತ್ಮ ಹೀಗೆ ಹೇಳಿದ್ದಾನೆ:

**ನಿಯತಂ ಕುರು ಕರ್ಮ ತ್ವಂ ಕರ್ಮಜ್ಯಾಯೋ ಹ್ಯಕರ್ಮಣಃ**
**ಶರೀರ ಯಾತ್ರಾಪಿ ಚ ತೇ ನ ಪ್ರಸಿದ್ಧ್ಯೇದಕರ್ಮಣಃ॥**
**(ಅಧ್ಯಾಯ:3-8)**

ನಿತ್ಯವೂ ಪಾಲಿಗೆ ಬಂದ ಕರ್ತವ್ಯಗಳನ್ನು ಮಾಡುತ್ತಿರು. ಕೆಲಸಗೇಡಿಯಾಗಿ ಅಥವಾ ಸೋಮಾರಿಯಾಗಿ ಅನಾವಶ್ಯಕ ಕಾಲ ಕಳೆಯುವುದಕ್ಕಿಂತ ಕಾಯಕದಲ್ಲಿ ತಲ್ಲೀನವಾಗಿರುವುದರಿಂದ ನಿನಗೇ ಒಳ್ಳೆಯದು. ಇಲ್ಲವಾದರೆ ನಿನ್ನ ದೇಹದ ಸುಸ್ಥಿತಿಯನ್ನು ಕಾಯ್ದುಕೊಳ್ಳಲಾಗುವುದಿಲ್ಲ. "ಬಾಳೆಂಬುದು ಹೊಲವು। ಆಳಾದರುಂಟು ಫಲವು, ಬಿತ್ತಿದ್ದು ಬೆಳೆವುದಣ್ಣ। ಉತ್ತಮವ ಬಿತ್ತೋ ಚೆನ್ನ" ಎಂದು ಗಂಗಪ್ಪವಾಲಿಯವರು ಹೇಳಿದಂತೆ, ಮನುಷ್ಯನ ಬಾಳಿನ ಗುರಿ ಕೇವಲ ಅನ್ನ-ಚಿನ್ನಗಳ ಸಂಪಾದನೆಯಲ್ಲ. ಅವುಗಳಿಂದ ಜನನ-ಮರಣ ಗೆಲ್ಲಲಾಗುವುದಿಲ್ಲ. 'ಬಿತ್ತಿದಂತೆ ಬೆಳೆ' ಬಾಳಿನಲ್ಲಿ ಇನ್ನೊಬ್ಬರೊಡನೆ ಒಳ್ಳೆಯ ಸಂಬಂಧ, ಭಾವನೆಗಳನ್ನು ಇಟ್ಟುಕೊಂಡಾಗ ಅವರೂ ಸಹ ಅದೇರೀತಿ ವರ್ತಿಸಬಹುದು. ಒಳ್ಳೆಯತನ ನಮ್ಮಿಂದಲೇ ಆರಂಭವಾಗಲಿ. ಪ್ರತಿಯೊಬ್ಬರನ್ನೂ ಪ್ರೀತಿ-ವಿಶ್ವಾಸದಿಂದ ಆಧರಿಸೋಣ. ಇಂತಹ ಸದ್ಗುಣಗಳು ಬರುವುದು ಉತ್ತಮ ಸಂಸ್ಕಾರ-ಸಂಸ್ಕೃತಿಯಿಂದ ಮಾತ್ರ.

ಬಾಳೊಂದು ಹೋರಾಟ ಅದರೊಡನೆ ಸೆಣಸಾಡುವುದರಿಂದ ಒಂದುರೀತಿಯಲ್ಲಿ ಆನಂದವಿದೆ, ಸೊಗಸಿದೆ ಮತ್ತು ಪ್ರೇಮವಿದೆ. ಬದುಕೊಂದು ಭರವಸೆಯ ಗೂಡು. ಇದನ್ನು ಹೆಣೆಯುತ್ತಾ ಇರಬೇಕೇ ಹೊರತು ಕೈಚೆಲ್ಲಿ ಕೂಡಬಾರದು. "ಬದುಕಿನುದ್ದಕ್ಕೂ ಆತ್ಮಬಲ ಹಾಗೂ ಅಭಿಮಾನ ಕಾಪಾಡಿಕೊಳ್ಳಲಾರದವನು ಮನುಷ್ಯನೇ ಅಲ್ಲ"ವೆಂದು ಪ್ರೇಮಚಂದ್ ಹೇಳಿದ್ದಾರೆ. ಸಂಸಾರದಲ್ಲಿದ್ದೇ ಬದುಕು ಕಂಡುಕೊಂಡವರು ಬಸವಣ್ಣನವರು "ಸಂಸಾರವೆಂಬುದೊಂದು ಗಾಳಿಯ ಸೊಡರು" ಎಂದು ಹೇಳಿರುವುದು ಆಶ್ಚರ್ಯವನ್ನುಂಟು ಮಾಡದೇ ಇರದು. ಇದನ್ನು ಆದಷ್ಟು ಜತನದಿಂದ ಕಾಪಾಡಿಕೊಳ್ಳಬೇಕು.

ಬದುಕು ಎಂದಿಗೂ ಪರಿಪೂರ್ಣ ಅಥವಾ ಸಮತೋಲನದಿಂದ ಕೂಡಿರುವುದಿಲ್ಲ. ಆದರೆ ಆ ಎಲ್ಲ ನ್ಯೂನತೆಗಳ ನಡುವೆಯೂ



ಹಾಗೆ ಮಾಡಿಕೊಳ್ಳುವುದು ಸಾಧ್ಯವಿದೆ. ಅದು ನಮ್ಮ ಕೈಯಲ್ಲೇ ಇದೆ. ಬರುವಾಗ-ಹೋಗುವಾಗ ಖಾಲಿ ಕೈಯಲ್ಲೇ ಬಂದಿದ್ದರೂ ಇರುವಷ್ಟೂ ದಿನವೂ ಪ್ರಕೃತಿ, ಪ್ರಾಣಿ, ಪಕ್ಷಿ ಹಾಗು ಇತರರಿಗೆ ಸಾಧ್ಯವಾದಷ್ಟು ಸಹಾಯ-ಸಹಕಾರ ನೀಡಿದಾಗ ಮಾನವ ಜನ್ಮ ಸಾರ್ಥಕವಾಗುವುದರಲ್ಲಿ ಸಂದೇಹವಿಲ್ಲ.

## ಕವಿ ಮನಸು

### ನಾಗರ ಪಂಚಮಿ

ಬಂದಿದೆ ಶ್ರಾವಣ ಮಾಸದ ಮೊದಲ ಹಬ್ಬ
ತುಂಬಿದೆ ತಂಬಿಟ್ಟು ಉಂಡೆಗಳಿಂದ ಡಬ್ಬ
ನಾಗರಾಜ ಪಂಚಮಿ ನಾಡಿಗೆ ದೊಡ್ಡದು
ನಾಗರಾಜನ ಮಹಿಮೆ ಹಿರಿದು

ಮಣ್ಣಿನ ಹುತ್ತಕ್ಕೆ ಕ್ಷೀರಾಭಿಷೇಕವ ಮಾಡುತ್ತಾ
ಅರಿಶಿಣಕುಂಕುಮ ಗೆಜ್ಜವಸ್ತ್ರ ಹೂವನು ಏರಿಸುತ್ತಾ
ಹೆಂಗಳೆಯರು ನಾಗಪ್ಪನಿಗೆ ಪೂಜೆಯ
ಮಾಡುವರು
ಭಕ್ತಿಯಿಂದ ದೋಷಗಳ ಪರಿಹರಿಸೆಂದು
ಬೇಡುವರು

ಗೆಳತಿಯರೆಲ್ಲಾ ಲಂಗ ದಾವಣಿಯ ತೊಟ್ಟು
ಕೈಯ ತುಂಬಾ ಬಳೆಗಳನಿಟ್ಟು
ನೀಳವಾದ ಕೇಶರಾಶಿಯನು ಜಡೆಯಾಗಿ ಹೆಣೆದು
ಮುಡಿಯ ತುಂಬಾ ಹೂವನು ಮುಡಿದು

ಜೋಕಾಲಿಯ ಜೀಕುವರು ಹರುಷದಿ
ಆಚರಿಸುವರು ಹಬ್ಬವ ಸಂಭ್ರಮದಿ

ಹಬ್ಬದಿ ತವರಿಗೆ ಸಹೋದರಿಯರನು
ಆಹ್ವಾನಿಸುವರು
ಸಹೋದರರೊಂದಿಗೆ ಸಿಹಿ ಊಟವ
ಮಾಡುವರು

– ಚೇತನ ಭಾರ್ಗವ ಬೆಂಗಳೂರು

### ಧನಿಕರಿಗೆ ಸೀಮಿತವೇ?




ನಗುವೆಂಬ ಸಿರಿಯೊಂದು
ಮೊಗದಲ್ಲಿ ಮೂಡಿಹುದು
ಸೊಗಸಾದ ನೋಟವಿದು ಕಣ್ಣಮುಂದೆ
ಹಗಲಲ್ಲಿ ದುಡಿಮೆಯಲಿ
ಮಗುವ ಮುದ್ದಿಸೆ ಬಿಡನು
ಬಿಗುಮಾನದೆಜಮಾನ ಬೆನ್ನ ಹಿಂದೆ

ಹಸಿವನ್ನು ನೀಗಿಸಲು
ಬಿಸಿಲಲ್ಲಿ ದುಡಿವವಳು
ವಸುಧೆಯಂತೆಯೆ ನಾರಿ ಶಾಂತ ಮೂರ್ತಿ
ಬಸವಳಿದ ದೇಹಕ್ಕೆ
ಹಸುಗೂಸು ಜೊತೆಗಿರಲು
ನಸುನಗೆಯು ಹೊಮ್ಮಿಹುದು ದೊರಕಿ ಶಾಂತಿ

ಧನಿಕರಿಗೆ ಸೀಮಿತವೆ
ಮನ ಶಾಂತಿ ಸೌಭಾಗ್ಯ
ಹಣತೆತ್ತು ಕೊಳ್ಳುವರೆ ಸುಖವನವರು
ಕನಕದಲಿ ಸುಖವೆಂದು
ದಿನನಿತ್ಯ ಹಂಬಲಿಸಿ
ಜನುಮವನು ಕಳೆವವರು ಸುಖವ ಪಡರು

ಅನುದಿನವು ಸಂತಸಕೆ
ಧನಕನಕ ಬೇಕಿಲ್ಲ
ಮನದೊಳಗೆ ಹುದುಗಿಹುದು ಹುಡುಕಬೇಕು
ಅನವರತ ಧನಕಾಗಿ
ಕನವರಿಸಿ ಕೂತಿರದೆ
ತನುಜರೊಳಗೊಂದಾಗು ಖುಷಿಗೆ ಸಾಕು॥

– ಪೆರ್ಮುಖ ಸುಬ್ರಹ್ಮಣ್ಯ ಭಟ್




# ಮಹನೀಯರ ಜಯಂತಿ ಅರ್ಥಪೂರ್ಣ ಆಚರಣೆ

## ಎಡಿಸಿ ಮೊಹಮ್ಮದ್ ಝುಬೇರ್ ಹೇಳಿಕೆ | ನುಲಿಯ ಚಂದಯ್ಯ, ಬ್ರಹ್ಮಶ್ರೀ ನಾರಾಯಣಗುರು, ಶ್ರೀಕೃಷ್ಣ ಜಯಂತಿ ಪೂರ್ವಭಾವಿ ಸಭೆ

**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲಾಡಳಿತ ವತಿಯಿಂದ ವಿವಿಧ ಮಹನೀಯರ ಜಯಂತಿಯ ಕಾರ್ಯಕ್ರಮಗಳನ್ನು ಜಿಲ್ಲಾ ಕೇಂದ್ರದಲ್ಲಿ ಅರ್ಥಪೂರ್ಣವಾಗಿ ಆಚರಿಸಲಾಗುವುದು ಎಂದು ಅಪರ ಜಿಲ್ಲಾಧಿಕಾರಿ ಮೊಹಮ್ಮದ್ ಝುಬೇರ್ ಅವರು ಹೇಳಿದರು.

ನಗರದ ನೂತನ ಜಿಲ್ಲಾಡಳಿತ ಭವನ ಸಭಾಂಗಣದಲ್ಲಿ ವಿವಿಧ ಮಹನೀಯರ ಜಯಂತಿ ಆಚರಣೆ ಕುರಿತು ಶುಕ್ರವಾರ ಏರ್ಪಡಿಸಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಆ.19 ರಂದು ನುಲಿಯ ಚಂದಯ್ಯ ಜಯಂತಿ, ಆ.20 ರಂದು ಬ್ರಹ್ಮಶ್ರೀ ನಾರಾಯಣಗುರು ಜಯಂತಿ ಮತ್ತು ಆ.26 ರಂದು ಶ್ರೀಕೃಷ್ಣ ಜಯಂತಿಯ ಕಾರ್ಯಕ್ರಮಗಳನ್ನು ಅರ್ಥಪೂರ್ಣವಾಗಿ, ಅಚ್ಚುಕಟ್ಟಾಗಿ ಆಯೋಜಿಸಲಾಗುವುದು. ಎಲ್ಲ ಸಮುದಾಯದವರು, ಸಂಘ-ಸಂಸ್ಥೆಗಳ ಮುಖಂಡರು, ಸಾರ್ವಜನಿಕರು ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಯಶಸ್ವಿಗೊಳಿಸುವಂತೆ ಮನವಿ ಮಾಡಿದರು.





ಆ.19ರಂದು ನುಲಿಯ ಚಂದಯ್ಯ ಜಯಂತಿಯ ಅಂಗವಾಗಿ ಮೆರವಣಿಗೆ ನೆರವೇರಲಿದ್ದು, ಮೆರವಣಿಗೆಯು ಬೆಂಕಿಮಾರೆಮ್ಮ (ಬಂಡಿಮೋಟ್) ದೇವಸ್ಥಾನದಿಂದ ಬ್ರೂಸ್‌ಪೇಟೆ ಪೊಲೀಸ್ ಠಾಣೆ ಮುಂಭಾಗ, ಹೆಚ್.ಆರ್.ಗವಿಯಪ್ಪ ವೃತ್ತದಿಂದ ಡಾ. ಜೋಳದರಾಶಿ ದೊಡ್ಡನಗೌಡ ರಂಗಮಂದಿರದ ವೇದಿಕೆ ಕಾರ್ಯಕ್ರಮದವರೆಗೂ ನಡೆಯಲಿದೆ. ಆ.20 ರಂದು ಬ್ರಹ್ಮಶ್ರೀ ನಾರಾಯಣಗುರು ಜಯಂತಿ ಕಾರ್ಯಕ್ರಮವಿದ್ದು, ಮೆರವಣಿಗೆಯು ನಗರದ ಈಡಿಗ ವಸತಿ ನಿಲಯ ಮುಂಭಾಗದಿಂದ ಆರಂಭವಾಗಿ ಗಡಿಗಿ ಚೆನ್ನಪ್ಪ ವೃತ್ತ, ಹೆಚ್.ಆರ್.ಗವಿಯಪ್ಪ ವೃತ್ತದಿಂದ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದ ವೇದಿಕೆ ಕಾರ್ಯಕ್ರಮದವರೆಗೂ ನಡೆಯಲಿದೆ. ಆ.26 ರಂದು ಶ್ರೀಕೃಷ್ಣ ಜಯಂತಿಯು ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ಆಯೋಜಿಸಲಾಗುತ್ತಿದ್ದು, ಶಿಷ್ಟಾಚಾರದಂತೆ ಆಹ್ವಾನ ಪತ್ರಿಕೆಯನ್ನು ಮುದ್ರಿಸಿ ಗಣ್ಯರನ್ನು ಆಹ್ವಾನಿಸಬೇಕು ಎಂದು ತಿಳಿಸಿದ ಅವರು, ವೇದಿಕೆ ಕಾರ್ಯಕ್ರಮದಲ್ಲಿ ಕುಡಿಯುವ ನೀರಿನ ವ್ಯವಸ್ಥೆ, ಸ್ವಚ್ಛತೆ ಕೈಗೊಳ್ಳಬೇಕು ಎಂದು ಮಹಾನಗರ ಪಾಲಿಕೆ ಅಧಿಕಾರಿಗಳಿಗೆ ಸೂಚಿಸಿದರು.

ವೇದಿಕೆ ಕಾರ್ಯಕ್ರಮದಲ್ಲಿ ಗೀನಗಾಯನ, ಭಕ್ತಿಗೀತೆ ಕಾರ್ಯಕ್ರಮ ನಡೆಯಲಿದೆ. ಮಹನೀಯರ ಕುರಿತು ನುರಿತ ಸಂಪನ್ಮೂಲ ವ್ಯಕ್ತಿಗಳಿಂದ ವಿಶೇಷ ಉಪನ್ಯಾಸ ಏರ್ಪಡಿಸಬೇಕು ಎಂದು ಹೇಳಿದರು.

ಸಭೆಯಲ್ಲಿ ಸಮುದಾಯದ ಮುಖಂಡರು ಜಯಂತಿ ಕಾರ್ಯಕ್ರಮ ಅದ್ದೂರಿಯಾಗಿ ಹಾಗೂ ಯಶಸ್ವಿಗೊಳಿಸಲು ತಮ್ಮ ಅಭಿಪ್ರಾಯ ನೀಡಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ ಸೇರಿದಂತೆ ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು ಸೇರಿದಂತೆ ಸಮುದಾಯದ ಮುಖಂಡರು ಹಾಗೂ ಇನ್ನಿತರರು ಉಪಸ್ಥಿತರಿದ್ದರು.

# ದೇಶಭಕ್ತಿಯ ಪ್ರತೀಕ ಹರ್‌ಘರ್ ತಿರಂಗಾ

## ಡಿಸಿ ಪ್ರಶಾಂತ್ ಕುಮಾರ್ ಮಿಶ್ರಾ | ಆ.13 ರಿಂದ ಮೂರು ದಿನಗಳ ಕಾಲ ಧ್ವಜ ಹಾರಿಸಲು ಕರೆ

**ಹಂಪಿ ಟೈಮ್ಸ್ ಬಳ್ಳಾರಿ**

ಸ್ವಾತಂತ್ರ ದಿನಾಚರಣೆ ಹಿನ್ನೆಲೆಯಲ್ಲಿ ಪ್ರತಿ ಮನೆ-ಮನೆ ಮೇಲೂ ರಾಷ್ಟ್ರಧ್ವಜವನ್ನು ಹಾರಿಸುವ ಮೂಲಕ ಹರ್‌ಘರ್ ತಿರಂಗಾ ಅಭಿಯಾನವನ್ನು ಯಶಸ್ವಿಗೊಳಿಸಿ ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಕರೆ ನೀಡಿದರು.



ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿ ಡಾ.ಆಜಯ್ ನಾಗಭೂಷಣ್ ರಾವ್ ಅವರ ಅಧ್ಯಕ್ಷತೆಯಲ್ಲಿ ಶುಕ್ರವಾರ ನಡೆದ ವಿಡಿಯೋ ಸಂವಾದ ಕಾರ್ಯಕ್ರಮದ ಬಳಿಕ ಜಿಲ್ಲಾ ಮಟ್ಟದ ಅಧಿಕಾರಿಗಳ ಜತೆ ಸಭೆ ನಡೆಸಿ ನಿರ್ದೇಶನ ನೀಡಿದರು.

ರಾಷ್ಟ್ರಧ್ವಜ ನಮ್ಮ ದೇಶದ ಹೆಮ್ಮೆ. ಪ್ರತಿಯೊಬ್ಬ ನಾಗರೀಕನೂ ರಾಷ್ಟ್ರಧ್ವಜಕ್ಕೆ ಗೌರವಿಸುವ ಕೆಲಸವಾಗಬೇಕು. ಆ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ನಿರ್ದೇಶನದಂತೆ ಹರ್ ಘರ್ ತಿರಂಗಾ ಅಭಿಯಾನವನ್ನು ಆ.13 ರಿಂದ ಆ.15 ರ ಹಮ್ಮಿಕೊಳ್ಳಲಾಗಿದೆ. ಕಳೆದ ಬಾರಿಯೂ ಜಿಲ್ಲೆಯಾದ್ಯಂತ ಈ ಅಭಿಯಾನ ಯಶಸ್ವಿ ಯಾಗಿತ್ತು. ಈ ಬಾರಿಯೂ ಹರ್‌ಘರ್ ತಿರಂಗಾ ಅಭಿಯಾನ ಮುಂದುವರಿದಿದೆ. ಪ್ರತಿಯೊಬ್ಬರಲ್ಲೂ ದೇಶಭಕ್ತಿ, ದೇಶಾಭಿಮಾನವನ್ನು ಮೂಡಿಸುವ ಈ ಅಭಿಯಾನವನ್ನು ಎಲ್ಲರೂ ಸಮರ್ಥವಾಗಿ ನಿರ್ವಹಿಸಬೇಕು. ಇದರನ್ವಯ ಸಾರ್ವಜನಿಕರು ಸ್ವಯಂಪ್ರೇರಿತರಾಗಿ ತಮ್ಮ ಮನೆಗಳ ಮೇಲೆ ರಾಷ್ಟ್ರಧ್ವಜವನ್ನು ಸಂಜೆ ಸೂರ್ಯಾಸ್ತದವರೆಗೆ ನಿರಂತರವಾಗಿ ಧ್ವಜ ಹಾರಿಸಬೇಕು ಎಂದು ಜಿಲ್ಲಾಧಿಕಾರಿ ಪ್ರಶಾಂತಕುಮಾರ್ ಮಿಶ್ರಾ ಹೇಳಿದರು.

ಹರ್ ಘರ್ ತಿರಂಗಾ ಅಭಿಯಾನದ ನಿಮಿತ್ತ ಜಿಲ್ಲಾ ಕೇಂದ್ರದಲ್ಲಿ ವೈವಿಧ್ಯಮ ಕಾರ್ಯಕ್ರಮ ಗಳನ್ನು ಆಯೋಜಿಸಲಾಗುವುದು. ಈ ಮೂಲಕ ರಾಷ್ಟ್ರಧ್ವಜದ ಗೌರವ ಮತ್ತು ಅದರ ಮೌಲ್ಯಗಳನ್ನು ಗಟ್ಟಿಗೊಳಿಸಿ ದೇಶಭಕ್ತಿಯ ಭಾವವನ್ನು ಮೂಡಿಸಲು ಪ್ರೇರೆಪಿಸುತ್ತದೆ.

ಜಿಲ್ಲೆಯಲ್ಲಿ ಎಲ್ಲಾ ಸಾರ್ವಜನಿಕರು ಮತ್ತು ತಮ್ಮ ನೆರೆಹೊರೆಯವರು ಕೂಡ ಹರ್ ಘರ್ ತಿರಂಗಾ ಅಭಿಯಾನದಲ್ಲಿ ಭಾಗವಹಿಸಬೇಕು. ಹಾಗಾಗಿ ಆ.13 ರಿಂದ 15 ರ ವರೆಗೆ ತಮ್ಮ ಮನೆಗಳ ಮೇಲೆ ಸ್ವಯಂ ಪ್ರೇರಿತರಾಗಿ ಧ್ವಜ ಹಾರಿಸಬೇಕು ಎಂದು ಜಿಲ್ಲಾಧಿಕಾರಿಗಳು ಕೋರಿದ್ದಾರೆ.

**ಹರ್ ಘರ್ ತಿರಂಗ ಅಭಿಯಾನದ ಉದ್ದೇಶ:**

ನಾಗರಿಕರು ತಮ್ಮ ಮನೆಗಳ ಮೇಲೆ ರಾಷ್ಟ್ರಧ್ವಜವನ್ನು ಹಾರಿಸುವಂತೆ ಉತ್ತೇಜಿಸಲು ಆಜಾದಿ ಕಾ ಅಮೃತ್ ಮಹೋತ್ಸವದ ಅಡಿಯಲ್ಲಿ, ಹರ್ ಘರ್ ತಿರಂಗ ಅಭಿಯಾನವನ್ನು ಆರಂಭಿಸಲಾಗಿದ್ದು, ಇದರ ಉದ್ದೇಶವು ಜನರ ಹೃದಯದಲ್ಲಿ ದೇಶಭಕ್ತಿಯ ಭಾವನೆಯನ್ನು ತುಂಬುವುದು ಮತ್ತು ರಾಷ್ಟ್ರ ನಿರ್ಮಾಣಕ್ಕಾಗಿ ಅವಿರತವಾಗಿ ಶ್ರಮಿಸಿದವರ ಕೊಡುಗೆಯನ್ನು ಸ್ಮರಿಸುವುದಾಗಿದೆ. ಹಾಗಾಗಿ ಆಗಸ್ಟ್ 13 ರಿಂದ 15 ರವರೆಗೆ ಪ್ರತಿಯೊಬ್ಬರ ಮನೆಗಳಲ್ಲಿ ತಿರಂಗವನ್ನು ಹಾರಿಸುವಂತೆ ಕೋರಲಾಗಿದೆ.

ಹರ್ ಘರ್ ತಿರಂಗಾ ಅಭಿಯಾನದಲ್ಲಿ ಭಾಗವಹಿಸಿದ ಸಾರ್ವಜನಿಕರು ತಮ್ಮ ಸೆಲ್ಫಿಗಳನ್ನು https://hargartiranga.com ನಲ್ಲಿ ಹಂಚಿಕೊಳ್ಳಬಹುದು.

**ಧ್ವಜಾರೋಹಣ ಮಾಡಲು ಪಾಲಿಸಬೇಕಾದ ನಿಯಮಗಳು:** ಭಾರತದ ಧ್ವಜ ಸಂಹಿತೆಯು ರಾಷ್ಟ್ರೀಯ ಧ್ವಜವು ಆಯತಾಕಾರವಾಗಿರಬೇಕು, ಉದ್ದ ಮತ್ತು ಎತ್ತರದ ನಿಗದಿತ ಅನುಪಾತ ದಲ್ಲಿರಬೇಕು. ಧ್ವಜವನ್ನು ಯಾವುದೇ ರೀತಿಯ ಅಲಂಕಾರ ಉದ್ದೇಶಗಳಿಗಾಗಿ ಬಳಸಬಾರದು.



ತ್ರಿವರ್ಣ ಧ್ವಜಕ್ಕೆ ತನ್ನದೇ ಆದ ಗೌರವ, ಘನತೆ ಇರುತ್ತದೆ. ಮನೆಯಲ್ಲಿ ರಾಷ್ಟ್ರಧ್ವಜವನ್ನು ಹಾರಿಸುವಾಗ ಮನೆಯ ಮೇಲಿನ ಅತೀ ಎತ್ತರದ ಜಾಗದಲ್ಲಿ ಮಾಡಬೇಕು. ಧ್ವಜ ಸ್ಥಂಭ ಮತ್ತು ಧ್ವಜ ನೆರವಾಗಿರಬೇಕು. ಅದು ಎಡಕ್ಕೆ, ಬಲಕ್ಕೆ, ಹಿಂದಕ್ಕೆ, ಮುಂದಕ್ಕೆ ವಾಲಿರಬಾರದು. ತ್ರಿವರ್ಣ ಧ್ವಜಕ್ಕಿಂತ ಎತ್ತರವಾಗಿ, ಸಮಾನವಾಗಿ ಹಾಗೂ ಧ್ವಜದ ಬಲಗಡೆ ಯಾವುದೇ ಧ್ವಜ ಇರಬಾರದು. ಗಲಿಜಾದ ಮತ್ತು ಹರಿದ ಧ್ವಜವನ್ನು ಬಳಸಬಾರದು. ಕೇಸರಿ ಬಣ್ಣ ಮೇಲೆ ಇರುವಂತೆ ಧ್ವಜಾರೋಹಣ ಮಾಡಬೇಕು. ಸಂವಿಧಾನವನ್ನು ಪಾಲಿಸುವುದು ಮತ್ತು ಅದರ ಆದರ್ಶಗಳು ಮತ್ತು ಸಂಸ್ಥೆಗಳು, ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು ಭಾರತದ ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಿದೆ. ಈ ಎಲ್ಲಾ ಅಂಶಗಳನ್ನು ಎಲ್ಲಾರೂ ಕಟ್ಟುನಿಟ್ಟಾಗಿ ಪಾಲನೆ ಮಾಡಿ ಹರ್ ಘರ್ ತಿರಂಗಾ ಅಭಿಯಾನವನ್ನು ಯಶಸ್ವಿಗೊಳಿಸಬೇಕು ಎಂದು ಅವರು ಜಿಲ್ಲಾಧಿಕಾರಿ ಮಿಶ್ರಾ ಅವರು ತಿಳಿಸಿದ್ದಾರೆ.

**ಜಿಲ್ಲಾ ಮಟ್ಟದಲ್ಲಿ ವೈವಿಧ್ಯಮ ಕಾರ್ಯಕ್ರಮ ಆಯೋಜನೆ:** ಹರ್ ಘರ್ ತಿರಂಗಾ ಅಭಿಯಾನ ನಿಮಿತ್ತ ಜಿಲ್ಲಾ ಕೇಂದ್ರದಲ್ಲಿ ಆ.12 ಮತ್ತು 13 ರಂದು ವೈವಿಧ್ಯಮ ಕಾರ್ಯಕ್ರಮ ಆಯೋಜಿಸಿದೆ. ಆ.12 ರಂದು ಸಂಜೆ 06.30 ಗಂಟೆಗೆ ನಗರದ ಸಾಂಸ್ಕೃತಿಕ ಸಮುಚ್ಛಯ ಆವರಣದ ನಾಡೋಜ ಸುಭದ್ರಮ್ಮ ಮನ್ಸೂರ್ ಬಯಲು ರಂಗಮಂದಿರದಲ್ಲಿ ದೇಶಪ್ರೇಮ ಬಿಂಬಿಸುವ ತಿಂಗಳ ಸೊಬಗು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜನೆ ಮಾಡಿದೆ. ಆ.13 ರಂದು ಬೆಳಿಗ್ಗೆ 06.30 ಗಂಟೆಗೆ ಬಳ್ಳಾರಿ ನಗರದ ಐತಿಹಾಸಿಕ ಬೆಟ್ಟ (ಕೋಟೆ) ಮೇಲೆ ಧ್ವಜಾರೋಹಣಾ ನೆರವೇರಿಸುವ ಕಾರ್ಯಕ್ರಮ ಹಮ್ಮಿಕೊಂಡಿದೆ. ಸಾರ್ವಜನಿಕರು ಭಾಗವಹಿಸ ಬಹುದು ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ತಿಳಿಸಿದ್ದಾರೆ.

# ಪ್ರವಾಸೋದ್ಯಮ ಇಲಾಖೆ ಆನ್‌ಲೈನ್ ವೋಟಿಂಗ್ ಕ್ಯಾಂಪೇನ್ ಆರಂಭ

**ಹಂಪಿ ಟೈಮ್ಸ್ ಹೊಸಪೇಟೆ**

ಪ್ರವಾಸೋದ್ಯಮವನ್ನು ಇನ್ನಷ್ಟು ಮೇಲ್ದರ್ಜೆಗೇರಿಸಲು ಹಾಗೂ ಧಾರ್ಮಿಕ, ಸಾಂಸ್ಕೃತಿಕ, ಪಾರಂಪರಿಕ, ನೈಸರ್ಗಿಕ ಹಾಗೂ ವನ್ಯಜೀವಿ ಮತ್ತು ಸಾಹಸ ಪ್ರವಾಸಿ ತಾಣಗಳಲ್ಲಿ ಪ್ರವಾಸಿಗರ ದೃಷ್ಟಿಕೋನದಲ್ಲಿ ಪ್ರಮುಖ ಪ್ರವಾಸಿ ತಾಣಗಳನ್ನು ಗುರುತಿಸಿ, ವಿಶ್ವದರ್ಜೆಯಲ್ಲಿ ಅಭಿವೃದ್ಧಿ ಪಡಿಸಲು ಕೇಂದ್ರ ಪ್ರವಾಸೋದ್ಯಮ ಸಚಿವಾಲದಿಂದ ದೇಖೋ ಅಪ್ನಾ ದೇಶ್, ಪೀಪಲ್ಸ್ ಚಾಯಿಸ್ 2024 (Dekho Apna Desh, People's Choice 2024) ಎಂಬ ಆನ್‌ಲೈನ್ ವೋಟಿಂಗ್ ಕ್ಯಾಂಪೇನ್ ಪ್ರಾರಂಭಿಸಿದ್ದು, ನಾಗರಿಕರು ಹಾಗೂ ಪ್ರವಾಸಿಗರು ತಮ್ಮ ಇಷ್ಟದ ಆದ್ಯತೆಯ ಪ್ರವಾಸಿ ತಾಣಗಳಿಗೆ ವೋಟ್ ಮಾಡಲು ಅವಕಾಶ ಕಲ್ಪಿಸಲಾಗಿದೆ. ಪ್ರವಾಸಿ ತಾಣಗಳಿಗೆ ವೋಟ್ ಮಾಡಲು ಸೆಪ್ಟಂಬರ್ 15 ಅಂತಿಮ ದಿನವಾಗಿರುತ್ತದೆ

ಈ ಸಂಬಂಧ ದೇಖೋ ಅಪ್ನಾ ದೇಶ್, ಪೀಪಲ್ಸ್ ಚಾಯಿಸ್ 2024 (Dekho Apna Desh, People's Choice 2024) ಕ್ಯಾಂಪೇನ್ ಅಡಿಯಲ್ಲಿ ವಿಜಯನಗರ ಜಿಲ್ಲೆಯ ಪ್ರಮುಖ ಧಾರ್ಮಿಕ, ಸಾಂಸ್ಕೃತಿಕ, ಪಾರಂಪರಿಕ, ನೈಸರ್ಗಿಕ ಹಾಗೂ ವನ್ಯಜೀವಿ ಪ್ರವಾಸಿ ತಾಣಗಳನ್ನು ಆದ್ಯತಾ ಪ್ರವಾಸಿ ತಾಣಗಳನ್ನಾಗಿ ಆಯ್ಕೆ ಮಾಡಲು ಪೂರಕವಾಗುವಂತೆ https://innovateindia.mygov.in/dekho-apna-desh/ನಲ್ಲಿ ಲಾಗಿನ್ ಆಗುವ ಮೂಲಕ ಜಿಲ್ಲೆಯ ಪ್ರಮುಖ ಪ್ರವಾಸಿ ತಾಣಗಳಿಗೆ ವೋಟ್ ಮಾಡಿ ಪ್ರಮಾಣ ಪತ್ರವನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳುವುದರ ಮೂಲಕ ಹೆಚ್ಚಿನ ಪ್ರಚಾರವನ್ನು ನೀಡುವಂತೆ ಎಲ್ಲಾ ಸಾರ್ವಜನಿಕರು ಹಾಗೂ ಪ್ರವಾಸಿಗರಲ್ಲಿ ಕೋರಿದೆ.

ಈ ಮೂಲಕ ವಿಜಯನಗರ ಜಿಲ್ಲೆಯ ಪ್ರವಾಸಿ ತಾಣಗಳಿಗೆ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಚ್ಚಿನ ಪ್ರಚಾರವನ್ನು ನೀಡಲು ಜಿಲ್ಲೆಯ ಎಲ್ಲಾ ನಾಗರಿಕರು ಹಾಗೂ ಪ್ರವಾಸಿಗರು ಸಹಕರಿಸುವಂತೆ ವಿಜಯನಗರ ಜಿಲ್ಲೆಯ ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿಯ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು ಪ್ರಕಟಣೆಯಲ್ಲಿ ತಿಳಿಸಿದ್ಧಾರೆ.

# ವಿದ್ಯಾರ್ಥಿಗಳಿಗೆ ಪತ್ರಿಕಾಲಯ ತರಬೇತಿಗೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಬಳ್ಳಾರಿ**

ಕರ್ನಾಟಕ ಮಾಧ್ಯಮ ಅಕಾಡೆಮಿಯು ಪತ್ರಿಕೋದ್ಯಮ ವಿಷಯದಲ್ಲಿ ಸ್ನಾತಕೋತ್ತರ ಪದವಿ ಅಥವಾ ಪದವಿ ಪಡೆದಿರುವ ಮಹಿಳಾ ವಿದ್ಯಾರ್ಥಿಗಳಿಗೆ ಪತ್ರಿಕಾಲಯದಲ್ಲಿ ತರಬೇತಿ ಪಡೆಯಲು ಅರ್ಜಿ ಆಹ್ವಾನಿಸಿದೆ.

ಪ್ರಸಕ್ತ ಸಾಲಿನಲ್ಲಿ 5 ಮಂದಿ ಮಹಿಳಾ ವಿದ್ಯಾರ್ಥಿಗಳಿಗೆ ಪ್ರಮುಖ ದಿನಪತ್ರಿಕೆಗಳ ಕಾರ್ಯಾಲಯಗಳಲ್ಲಿ 2 ತಿಂಗಳ ಕಾಲ ತರಬೇತಿ ಪಡೆಯಲು, ಮಾಸಿಕ ತಲಾ 20,000 ರೂ. ಗಳನ್ನು ಶಿಶ್ಯವೇತನ ನೀಡಲಾಗುವುದು.

ಕರ್ನಾಟಕದ ಯಾವುದೇ ವಿಶ್ವವಿದ್ಯಾಲಯಗಳಲ್ಲಿ ಪತ್ರಿಕೋದ್ಯಮ ವಿಷಯದಲ್ಲಿ ಸ್ನಾತಕೋತ್ತರ, ಪದವಿಯಲ್ಲಿ ಅತಿ ಹೆಚ್ಚು ಅಂಕ ಗಳಿಸಿರುವ ವಿದ್ಯಾರ್ಥಿಗಳಿಗೆ ಆದ್ಯತೆ ನೀಡಲಾಗಿದೆ.

ಮಹಿಳಾ ವಿದ್ಯಾರ್ಥಿಗಳು ಆಗಸ್ಟ್ 26 ರೊಳಗೆ ತಮ್ಮ ಸ್ವವಿವರ, ದೂರವಾಣಿ ಸಂಖ್ಯೆ, ಇ-ಮೇಲ್ ವಿಳಾಸ, ಆರ್ಥಿಕ ಸ್ಥಿತಿ, ಅಂಕಪಟ್ಟಿಗಳ ಫೋಟೋ ಪ್ರತಿಯನ್ನು ಸ್ಕ್ಯಾನ್ ಮಾಡಿ karnatakamediaacademy@gmail.com ಗೆ ಇಮೇಲ್ ಮೂಲಕ ಕಳುಹಿಸಬಹುದು.

28 ವರ್ಷದೊಳಗಿನ ಮಹಿಳಾ ವಿದ್ಯಾರ್ಥಿಗಳಿಗೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದ್ದು, ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಅಕಾಡೆಮಿಯು ಅರ್ಹತಾ ಪರೀಕ್ಷೆ ನಡೆಸಲಿದೆ. ಈ ಪರೀಕ್ಷೆಯ ದಿನಾಂಕ, ಸ್ಥಳ ಮತ್ತು ಸಮಯವನ್ನು ಸಂದರ್ಶನದ ವೇಳೆ ತಿಳಿಸಲಾಗುವುದು ಎಂದು ಕರ್ನಾಟಕ ಮಾಧ್ಯಮ ಅಕಾಡೆಮಿಯ ಕಚೇರಿ ಪ್ರಕಟಣೆ ತಿಳಿಸಿದೆ.

# ಅಲ್ಪಸಂಖ್ಯಾತರ ಅಭಿವೃದ್ಧಿಯಿಂದ ಅರ್ಜಿ ಅಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ 2024-25ನೇ ಸಾಲಿನಲ್ಲಿ ವಿವಿಧ ಯೋಜನೆಗಳಲ್ಲಿ ಸಾಲ ಸೌಲಭ್ಯ ಪಡೆಯಲು ಮತೀಯ ಅಲ್ಪಸಂಖ್ಯಾತರಿಂದ (ಮುಸ್ಲಿಂ, ಕ್ರಿಶ್ಚಿಯನ್, ಜೈನರು, ಬೌದ್ಧರು, ಸಿಖ್ಖರು, ಪಾರ್ಸಿಗಳು ಜನಾಂಗದವರಿಂದ) ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. https://kmdconline.karnataka.gov.in ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಆಗಸ್ಟ್ 31 ಕೊನೆಯ ದಿನಾಂಕವಾಗಿದೆ.

**ಸಹಾಯಧನ ಯೋಜನೆ:** ಅಲ್ಪಸಂಖ್ಯಾತರ ಸಮುದಾಯದ ಸ್ವ-ಸಹಾಯ ಗುಂಪುಗಳಿಗೆ ವಿವಿಧ ರೀತಿಯ ಸ್ವಯಂ ಉದ್ಯೋಗ ಚಟುವಟಿಕೆಯಲ್ಲಿ ತೊಡಗಿಸಿ ಅವರನ್ನು ಆರ್ಥಿಕ ಸ್ವಾವಲಂಭಿಯಾಗಿಸಲು ರಾಷ್ಟ್ರೀಕೃತ, ಶೆಡ್ಯೂಲ್ ಬ್ಯಾಂಕ್, ಆರ್‌ಬಿಐ ನಿಂದ ಮಾನ್ಯತೆ ಪಡೆದ ವಿವಿಧ ಆರ್ಥಿಕ ಸಂಸ್ಥೆಗಳಿಂದ ಪಡೆಯುವ ಸಾಲಕ್ಕೆ ಘಟಕವೆಚ್ಚದ ಶೇ.50 ಅಥವಾ ಗರಿಷ್ಠ ರೂ. 2.00 ಲಕ್ಷ ಸಹಾಯಧನವನ್ನು ನಿಗಮದಿಂದ ಒದಗಿಸಲಾಗುವುದು. ಸಹಾಯಧನವು ಬ್ಯಾಕ್ ಎಂಡ್ ಸಬ್ಸಿಡಿಯಾಗಿದ್ದು, ಸ್ವ-ಸಹಾಯ ಸಂಘಗಳ ಆರ್ಥಿಕ ಬ್ಯಾಂಕ್ ಗಳಿಂದ ಪಡೆದ ಸಾಲದ ಮರುಪಾವತಿಗೆ ಹೊಂದಾಣಿಕೆ ಮಾಡಲಾಗುವುದು.

ಪ್ರೋತ್ಸಾಹ ಯೋಜನೆ:ರೇಷ್ಮೆ ನೂಲು ಬಿಚ್ಚಾಣಿಕೆಯಲ್ಲಿ ತೊಡಗಿರುವ ಅಲ್ಪಸಂಖ್ಯಾತ ಫಲಾನುಭವಿಗಳನ್ನು ಪ್ರೋತ್ಸಾಹಿಸಿ ಅವರ ಆರ್ಥಿಕ ಸ್ಥಿತಿಯನ್ನು ಉತ್ತಮ ಪಡಿಸುವ ಸಲುವಾಗಿ ರೇಷ್ಮೆ ನೂಲು ಬಿಚ್ಚಾಣಿಕೆದಾರರಿಗೆ ಅಗತ್ಯವಿರುವ ದುಡಿಮೆ ಬಂಡವಾಳ (working capital) ಮತ್ತು ಮೂಲಭೂತ ಸೌಕರ್ಯವನ್ನು ಒದಗಿಸಲು ನಿಗಮದಿಂದ ರೂ. 2.00 ಲಕ್ಷದ ವರೆಗೆ ಸಾಲ ಸಹಾಯಧನ ಒದಗಿಸಲಾಗುವುದು. ಇದರಲ್ಲಿ ಶೇ. 50 ಸಹಾಯಧನವಾಗಿರುತ್ತದೆ.

**ಪ್ರೋತ್ಸಾಹ ಯೋಜನೆ:** ಸಿಖ್ಖ ಧರ್ಮದಲ್ಲಿರುವ ಸಿಖ್ಖಲಿಗಾರ ಸಮುದಾಯದ ಜನರು ಆರ್ಥಿಕವಾಗಿ ಹಿಂದುಳಿದಿರುತ್ತಾರೆ. ಈ ಸಮುದಾಯದ ಹೆಚ್ಚಿನ ಕುಟುಂಬಗಳು ಐರಾನ್ ವೇರ್ ವೆಲ್ಡಿಂಗ್/ಫ್ಯಾಬ್ರಿಕೇಷನ್ಸ್ (Iron ware, Welding/Fabrications) ಕೂಲಿ ಕೆಲಸವನ್ನು ನಿರ್ವಹಿಸುತ್ತಿದ್ದು, ವಾರ್ಷಿಕ ಆದಾಯವು ರೂ. 50.000 ರಿಂದ 1,00,000 ಗಳಾಗಿರುತ್ತದೆ. ಸಿಖ್ಖಲಿಗಾರ ಸಮುದಾಯದ ಜನರನ್ನು ಆರ್ಥಿಕ ಸ್ವಾವಲಂಬಿಗಳಾಗಿ ಮಾಡುವ ಸಲುವಾಗಿ ನಿಗಮದಿಂದ ಸ್ವಯಂ ಉದ್ಯೋಗ ಚಟುವಟಿಕೆ ಗಳನ್ನು ಕೈಗತ್ತಿಕೊಳ್ಳಲು ರೂ. 50,000 ಸಾಲ ಮತ್ತು ರೂ. 50,000 ಸಹಾಯಧನವನ್ನು ಮತ್ತು ಗೂಡ್ಸ್ ಟೆಂಪೂ, ವಾಹನ ಖರೀದಿಸಲು ವಾಹನ ಮೊತ್ತದ ಶೇ.33 ಗರಿಷ್ಠ ರೂ. 1.50 ಲಕ್ಷ ಸಹಾಯಧನ ಒದಗಿಸಲಾಗುವುದು. ಒಂದು ವೇಳೆ ಸ್ವಯಂ ಉದ್ಯೋಗಕ್ಕೆ ಬ್ಯಾಂಕ್ ಹಾಗೂ ಆರ್ಥಿಕ ಸಂಸ್ಥೆಗಳಿಂದ ಸಾಲ ಪಡೆಯುವುದಾದಲ್ಲಿ ನಿಗಮದಿಂದ ಶೇ. 33 ಗರಿಷ್ಠ ರೂ. 1.00 ಲಕ್ಷ ಸಹಾಯಧನ ಒದಗಿಸಲಾಗುವುದು.

ಈ ಹಿಂದೆ ನಿಗಮದ ಸೌಲಭ್ಯವನ್ನು ಪಡೆದವರು ಮತ್ತೆ ಸೌಲಭ್ಯ ಪಡೆಯಲು ಅರ್ಹರಿರುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ವ್ಯವಸ್ಥಾಪಕರು, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ, ಕೊಠಡಿ ಸಂ:06. ಮೊದಲನೇ ಮಹಡಿ, ತಾಲೂಕು ಕಚೇರಿ, ಹೊಸಪೇಟೆ-583201, ವಿಜಯನಗರ ಜಿಲ್ಲೆ. ಅಥವಾ ದೂ.ಸಂ:08392-294370 ಗೆ ಸಂಪರ್ಕಿಸಿ.

# ವಿದ್ಯಾರ್ಥಿನಿಲಯಗಳ ಪ್ರವೇಶಕ್ಕೆ ಅರ್ಜಿ ಆಹ್ವಾನ

ಮೊದಲ ಪುಟದಿಂದ

ಹೊಸ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ಪ್ರಾರಂಭದ ದಿನಾಂಕ ಆ.9, ಅರ್ಜಿ ಸಲ್ಲಿಸಲು ಸೆಪ್ಟಂಬರ್ 4 ಕೊನೆಯ ದಿನವಾಗಿದೆ.

ಹೊಸ ಅರ್ಜಿಗಳನ್ನು ತಾಲೂಕು ಕಲ್ಯಾ ಣಾಧಿಕಾರಿಗಳು ಪರಿಶೀಲನೆ ಮಾಡಲು ಸೆ.6 ಅಂತಿಮ ದಿನವಾಗಿದೆ. ತಾಲೂಕು ಸಮಿತಿಯ ಮೂಲಕ ಆಯ್ಕೆ ಹೊಸ ವಿದ್ಯಾರ್ಥಿಗಳ ಆಯ್ಕೆಪಟ್ಟಿಯನ್ನುಸೆ.11ರಂದು ಮಾಡಲಾಗುತ್ತದೆ. ಆಯ್ಕೆಯಾದ ವಿದ್ಯಾರ್ಥಿ ಗಳು ಸೆ.17ರಂದು ವಿದ್ಯಾರ್ಥಿನಿಲಯಗಳಿಗೆ ಪ್ರವೇಶ ಪಡೆಯಲು ಕೊನೆಯ ದಿನವಾಗಿದೆ. ವಿದ್ಯಾರ್ಥಿಗಳು https://shp.karnataka.gov.in/bcwಜವೆಬ್‌ಸೈಟ್‌ನಲ್ಲಿ ಅರ್ಜಿ ಸಲ್ಲಿಸಬೇಕು. ಅರ್ಜಿ ಸಲ್ಲಿಸಲು ತಾಂತ್ರಿಕ ತೊಂದರೆಗಳಾದಲ್ಲಿ bcwdhelpline@gmail.com ಇ-ಮೇಲ್ ಮುಖಾಂತರ ಅಥವಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಥವಾ ತಾಲೂಕು ಅಧಿಕಾರಿಗಳು ಅಗತ್ಯ ದಾಖಲೆಗಳೊಂದಿಗೆ ಸಂಪರ್ಕಿಸುವುದು. ಸಹಾಯವಾಣಿ ಸಂಖ್ಯೆ 8050770004 ಮತ್ತು 8050770005 ಗೆ ಸಂಪರ್ಕಿಸಿ.

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

## ನಿತ್ಯ ಪಂಚಾಂಗ

ಮಾಸ: ಶ್ರಾವಣ। ಸಂವತ್ಸರ: ಕ್ರೋಧಿ

10–08–2024 – ಶನಿವಾರ

| | |
|---|---|
| ತಿಥಿ | : ಷಷ್ಠಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಚಿತ್ತ |
| ಯೋಗ | : ಸಾಧ್ಯ |
| ಕರಣ | : ಕೌಳವ |
| ಸೂರ್ಯೋದಯ | : 06:02:31 |
| ಸೂರ್ಯಾಸ್ತ | : 19:01:38 |
| ರಾಹು | : 09:17–10:55 |
| ಯಮಘಂಡ | : 14:09–15:47 |
| ಗುಳಿಕ | : 06:03–07:40 |

## ತುಂಗಭದ್ರಾ ನೀರಿನ ಮಟ್ಟ



ಶುಕ್ರವಾರ : 09–08–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1633.00 ಅಡಿ |
| ಒಳ ಹರಿವು | 45086 ಕ್ಯುಸೆಕ್ |
| ಹೊರ ಹರಿವು | 31831 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 104.704 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1628.33 ಅಡಿ |
| ಒಳ ಹರಿವು | 28997 ಕ್ಯುಸೆಕ್ |
| ಹೊರ ಹರಿವು | 9165 ಕ್ಯುಸೆಕ್ |
| ಸಾಮರ್ಥ್ಯ | 87.924 ಟಿಎಂಸಿ |

# ಔಷಧಿ ಸಿಂಪರಣೆಗೆ ಡ್ರೋನ್ ಬಳಕೆ

## ಕಡಿಮೆ ಸಮಯ ಹೆಚ್ಚು ಕೆಲಸ । ಕಾರ್ಮಿಕರ ಸಮಸ್ಯೆಗೆ ಪರಿಹಾರ
## ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಡಾ.ಸೋಮಸುಂದರ್ ಹೇಳಿಕೆ



■ ಹಂಪಿ ಟೈಮ್ಸ್ ಬಳ್ಳಾರಿ

ರೈತರ ಜೀವನ ಸುಗಮಗೊಳ್ಳಲು ಸರ್ಕಾರದ ವಿವಿಧ ಕೃಷಿ ಯೋಜನೆಗಳನ್ನು ಅಳವಡಿಸಿಕೊಂಡು ಕೃಷಿ ಕ್ಷೇತ್ರದಲ್ಲಿ ಅಭಿವೃದ್ಧಿ ಹೊಂದಬೇಕು ಎಂದು ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಡಾ.ಸೋಮಸುಂದರ್ ಕೆ.ಎಂ ತಿಳಿಸಿದರು.

ಕೃಷಿ ಇಲಾಖೆ ವತಿಯಿಂದ ರಾಷ್ಟ್ರೀಯ ಆಹಾರ ಭದ್ರತೆ ಯೋಜನೆಯಡಿ ಬಳ್ಳಾರಿ ತಾಲ್ಲೂಕಿನ ಹಲಕುಂದಿ, ಸಂಜೀವರಾಯನ ಕೋಟೆ, ಕುರುಗೋಡು ತಾಲ್ಲೂಕಿನ ಸಿಂಧಿಗೇರಿ ಗ್ರಾಮಗಳಲ್ಲಿ ಎಫ್‌ಎನ್‌ಎಸ್ ಯೋಜನೆಯ ತೊಗರಿ ಸಜ್ಜೆ ಕ್ಷೇತ್ರಗಳ ಸಮಗ್ರ ಬೆಳೆ ನಿರ್ವಹಣೆ ಗುಚ್ಚ ಪ್ರಾತ್ಯಕ್ಷಿಕೆ ತೋರ್ಪಡಿಸಿ ಮಾತನಾಡಿದರು.

ರೈತರು ಸರ್ಕಾರದಿಂದ ಸಿಗುವ ಸೌಲಭ್ಯಗಳಿಗೆ ವಂಚಿತರಾಗದೇ, ಪ್ರತಿಯೊಬ್ಬ ಅರ್ಹ ರೈತರು ಯೋಜನೆಗಳ ಸಂಪೂರ್ಣ ಮಾಹಿತಿ ಪಡೆದುಕೊಂಡು, ಫಲಾನುಭವಿಗಳಾಗಬೇಕು ಎಂದು ರೈತರಿಗೆ ಸಲಹೆ ನೀಡಿದರು. ಅದೇ ರೀತಿಯಾಗಿ ರೈತಾಪಿ ವರ್ಗದವರು ತಪ್ಪದೇ ಬೆಳೆ ವಿಮೆ ಮಾಡಿಸಿಕೊಳ್ಳಬೇಕು ಎಂದರು.

ರಾಷ್ಟ್ರೀಯ ಆಹಾರ ಭದ್ರತೆಯ ಸಂಯೋಜಕ ಡಾ.ಪಿ.ಕೆ ಸಾಹಾ ಮಾತನಾಡಿ, ತೊಗರಿಯ ಹೆಚ್ಚಿನ ಇಳುವರಿ ಪಡೆಯಲು ಆಧುನಿಕ ತಂತ್ರಜ್ಞಾನ ಮತ್ತು ಮಿಶ್ರ ಬೆಳೆ ಪದ್ಧತಿ ಅಳವಡಿಸಿಕೊಳ್ಳಬೇಕು. ಸಿರಿಧಾನ್ಯ ಬೆಳೆಗಳ ಮಹತ್ವ ಪ್ರತಿಯೊಬ್ಬ ರೈತರು ಅರಿಯಬೇಕು ಎಂದರು.

ಪ್ರಸ್ತುತ ಕೃಷಿಯಲ್ಲಿರುವ ಕೂಲಿಕಾರರ ಸಮಸ್ಯೆಯನ್ನು ನಿಭಾಯಿಸಲು ಹಾಗೂ ಕಡಿಮೆ ಸಮಯದಲ್ಲಿ ಹೆಚ್ಚಿನ ಕ್ಷೇತ್ರದಲ್ಲಿ ಔಷಧಿ ಸಿಂಪರಣೆ ಮಾಡಲು ಡ್ರೋನ್ ಬಳಕೆ ಅನುಕೂಲವಾಗುತ್ತದೆ ಎಂದು ತಿಳಿಸಿದರು. ಸಿಂಧಿಗೇರಿ ಗ್ರಾಮದಲ್ಲಿ ತೊಗರಿ ಮತ್ತು ನವಣೆ ಮಿಶ್ರ ಬೆಳೆಯ ಕ್ಷೇತ್ರದಲ್ಲಿ ಡ್ರೋನ್ ಮೂಲಕ ಲಘು ಪೋಷಕಾಂಶಗಳ ಸಿಂಪರಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ಕೃಷಿ ಇಲಾಖೆಯ ಉಪ ಕೃಷಿ ನಿರ್ದೇಶಕ ಎನ್.ಕೆಂಗೇಗೌಡ, ಸಹಾಯಕ ಕೃಷಿ ನಿರ್ದೇಶಕ ದಯಾನಂದ್.ಎಂ., ಬಳ್ಳಾರಿಯ ರೈತ ಸಂಪರ್ಕ ಕೇಂದ್ರದ ಕೃಷಿ ಅಧಿಕಾರಿ ಬಸವರಾಜ್ ಸಿಂಧಿಗೆರಿ, ಕೋಳೂರಿನ ರೈತ ಸಂಪರ್ಕ ಕೇಂದ್ರದ ಕೃಷಿ ಅಧಿಕಾರಿ ಯೇಸು ಬಾಬು.ಕೆ., ಸೇರಿದಂತೆ ಸಿಬ್ಬಂದಿಗಳಾದ ವಾಣಿ, ರೇಣುಕಾರಾಧ್ಯ ಮತ್ತು ರೈತರು ಉಪಸ್ಥಿತರಿದ್ದರು.



# ಶ್ರೀ ನಾಗರದೇವ ಸ್ಮರಣೆ ಭಕ್ತಿಯ ಭಜನೆ ಹಾಡಿಗೆ ಆನಂದಿಸಿದ ಭಕ್ತರು



■ ಹಂಪಿ ಟೈಮ್ಸ್ ಕೊಟ್ಟೂರು

ಪಟ್ಟಣದ ಬಸ್ ಸ್ಟ್ಯಾಂಡ್ ಬಳಿ ಶ್ರೀ ನಾಗರಾಜ್ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ಶುಕ್ರವಾರ ನಾಗರ ಪಂಚಮಿ ಹಾಗೂ ಶ್ರಾವಣ ಮಾಸದ ಪ್ರಯುಕ್ತ ಅಲ್ಲಿನ ನಾಗರ ಹಾವಿನ ಮೂರ್ತಿಗಳಿಗೆ ಬ್ರಾಹ್ಮೀ ಮುಹೂರ್ತದಲ್ಲಿ ಪಂಚಾಮೃತ ಅಭಿಷೇಕ್ ಸೇರಿದಂತೆ ವಿಶೇಷ ಪೂಜಾ ಕೈಂಕಾರ್ಯಗಳು ನೆರವೇರಿಸಿದರು ಜತೆಗೆ ಶ್ರೀನಾಗರಾಜ ಭಜನಾಸಂಘ, ಕೋರಕಣ ಅವರಿಂದ ದೇವರ ನಾಮ ಸ್ಮರಣೆ ಯುಳ್ಳ ಭಕ್ತಿಯುತ ಭಜನಾ ಪದಗಳು ಸಂಭ್ರಮದಿಂದ ನೆರವೇರಿದವು, ದೇವರ ದರ್ಶನಕ್ಕೆ ಆಗಮಿಸಿದ ಭಕ್ತರು ಭಜನಾ ಹಾಡುಗಳನ್ನು ಕೇಳಿ ಆನಂದಿಸುತ್ತ ದೇವರಿಗೆ ಭಕ್ತಿ ಸಮರ್ಪಿಸಿದರು.

# ವಸತಿನಿಲಯ ಪ್ರವೇಕ್ಕೆ ಅರ್ಜಿ ಆಹ್ವಾನ

■ ಹಂಪಿ ಟೈಮ್ಸ್ ಬಳ್ಳಾರಿ

ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮೆಟ್ರಿಕ್ ನಂತರದ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳಲ್ಲಿ ಪ್ರಸಕ್ತ ಸಾಲಿಗೆ ಸಾಮಾನ್ಯ ಪದವಿ ಕೋರ್ಸಿನ ವಿದ್ಯಾರ್ಥಿಗಳ ಪ್ರವೇಶಾತಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ ಎಂದು ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಜಲಾಲಪ್ಪ ಎ.ಕೆ ಅವರು ತಿಳಿಸಿದ್ದಾರೆ.

ಪ್ರವರ್ಗ–1, 2ಎ, 2ಬಿ, 3ಎ, 3ಬಿ, ಪ.ಜಾತಿ, ಪ.ವರ್ಗ ಮತ್ತು ಇತರೆ ಜನಾಂಗಗಳಿಗೆ ಸೇರಿದ ವಿದ್ಯಾರ್ಥಿಗಳು ಸೆ.04 ರ ಒಳಗಾಗಿ ಆನ್‌ಲೈನ್ ಮೂಲಕ ಇಲಾಖೆಯ ವೆಬ್‌ಸೈಟ್ https://shp.karnataka.gov.in ಗೆ ಭೇಟಿ ನೀಡಿ ಅರ್ಜಿ ಸಲ್ಲಿಸಬಹುದು. ವಿದ್ಯಾರ್ಥಿಯ ಪೋಷಕರ ವಾರ್ಷಿಕ ಆದಾಯ ಮಿತಿಯು ಪ್ರವರ್ಗ–1, ಎಸ್‌ಸಿ ಮತ್ತು ಎಸ್‌ಟಿ ರೂ.2.50 ಲಕ್ಷ ಹಾಗೂ ಪ್ರವರ್ಗ–2ಎ, 2ಬಿ, 3ಎ, 3ಬಿ, ಇತರೆ ಹಿಂದುಳಿದ ವರ್ಗ ಹಾಗೂ ಇತರೆ ವರ್ಗದ ವಿದ್ಯಾರ್ಥಿಗಳ ವಾರ್ಷಿಕ ವರಮಾನ ರೂ.1 ಲಕ್ಷ ಇರಬೇಕು. ತಾಲ್ಲೂಕುವಾರು ವಿದ್ಯಾರ್ಥಿನಿಲಯಗಳ ವಿವರ ಹಾಗೂ ವಿದ್ಯಾರ್ಥಿನಿಲಯದ ಪ್ರವೇಶಕ್ಕೆ ಇರಬೇಕಾದ ಅರ್ಹತೆ, ಸಲ್ಲಿಸಬೇಕಾದ ದಾಖಲೆಗಳ ವಿವರ ಮತ್ತು ಸರ್ಕಾರದ ಆದೇಶಕ್ಕಾಗಿ ಇಲಾಖೆಯ ವೆಬ್‌ಸೈಟ್ https://bcwd.karnataka.gov.in/ ನ್ನು ನೋಡಬಹುದು. ಹೆಚ್ಚಿನ ಮಾಹಿತಿಗಾಗಿ ಸಹಾಯವಾಣಿ ಸಂ.8050770005 ಗೆ ಸಂಪರ್ಕಿಸಿ.

# ಕುರಿ ರಕ್ಷಣೆಗೆ ಹುಲಿಯೊಂದಿಗೆ ಹೋರಾಟ

## ಶಾಸನಶಾಸ್ತ್ರ ವಿಭಾಗದ ಸಂಶೋಧನಾರ್ಥಿ ಡಿ.ವೀರೇಶ ಉಪನ್ಯಾಸ
## ಇತಿಹಾಸದ ಆಕರಗಳಾದ ಸ್ಮಾರಕ ಶಿಲ್ಪಗಳ ಅಧ್ಯಯನ ನಡೆಯಲಿ

■ ಹಂಪಿ ಟೈಮ್ಸ್ ಹೊಸಪೇಟೆ

ಪ್ರಾಚೀನ ಕರ್ನಾಟಕದ ಇತಿಹಾಸ, ಸಂಸ್ಕೃತಿಯನ್ನು ಅರಿತುಕೊಳ್ಳುವಲ್ಲಿ ವೀರಗಲ್ಲುಗಳು ಬಹುಮುಖ್ಯ ಆಕರಗಳಾಗಿವೆ. ಈ ವೀರಗಲ್ಲುಗಳು ಯುದ್ಧದಲ್ಲಿ ಹೋರಾಡುತ್ತ ಮಡಿದ ವ್ಯಕ್ತಿಯ ನೆನಪಿಗಾಗಿ ಸ್ಥಾಪಿಸಿದ ಸ್ಮಾರಕಗಳಾಗಿವೆ. ಜೊತೆಗೆ ಹಸು, ನಾಯಿ ಮೊದಲಾದ ಪ್ರಾಣಿಗಳನ್ನು ಕಳ್ಳಕಾಕರಿಂದ ರಕ್ಷಣೆ ಮಾಡಿದವರ ನೆನಪಿಗಾಗಿಯೂ ವೀರಗಲ್ಲುಗಳು ನಮ್ಮಲ್ಲಿ ದೊರಕುತ್ತವೆ. ಅಂಥ ವೀರಗಲ್ಲುಗಳಲ್ಲಿ ಕುರಿಗಾರರು ತಮ್ಮ ಕುರಿ–ಮೇಕೆಗಳನ್ನು ರಕ್ಷಿಸಿದ ಪ್ರಸಂಗವನ್ನು ಕೆಲವು ವೀರಗಲ್ಲುಗಳು, ಸ್ಮಾರಕ ಶಿಲ್ಪಗಳನ್ನು ಕಾಣಬಹುದು. ಇಂಥ ವೀರಗಲ್ಲುಗಳ ಮೂಲಕ ಪ್ರಾಚೀನ ಕುರುಬ ಸಮುದಾಯದ ವೀರರ ಶೌರ್ಯ, ಸಾಹಸಗಳನ್ನು ಕಂಡುಕೊಳ್ಳಬಹುದಾಗಿದೆ ಎಂದು ಕನ್ನಡ ವಿಶ್ವವಿದ್ಯಾಲಯದ ಶಾಸನಶಾಸ್ತ್ರ ವಿಭಾಗದ ಸಂಶೋಧನಾರ್ಥಿ ಡಿ.ವೀರೇಶ ಅಭಿಪ್ರಾಯ ವ್ಯಕ್ತಪಡಿಸಿದರು.

ಹಾಲುಮತ ಅಧ್ಯಯನ ಪೀಠವು ಆಯೋಜಿಸಿದ್ದ ಹಾಲುಮತ ಮಂಟಪ–7 ಸ್ಮಾರಕ ಶಿಲ್ಪಗಳಲ್ಲಿ ಕುರುಬ ವೀರರು ಎಂಬ ವಿಶೇಷ ಉಪನ್ಯಾಸದಲ್ಲಿ ಮಾತನಾಡಿದರು. ಹಡಗಲಿ ತಾಲೂಕು ಹೊಳಗುಂದಿ, ಪುರ,



ಉತ್ತಂಗಿ, ಗ್ರಾಮಗಳಲ್ಲಿ ಕುರುಬ ವೀರರು ಇದ್ದರು ಎಂಬುದನ್ನು ಅಲ್ಲಿ ಶೋಧಗೊಂಡ ಶಿಲ್ಪಗಳು ಹೇಳುತ್ತವೆ. ಕುರಿಗಳ ರಕ್ಷಣೆಗಾಗಿ ಹುಲಿಯೊಂದಿಗೆ ಹೋರಾಡಿದ ವೀರನ ಚರಿತ್ರೆಯನ್ನು ಶಿಲ್ಪವೊಂದು ವಿವರಿಸುತ್ತದೆ. ಹಾಗೆಯೇ ಟಗರು ಕಾಳಗ ನಡೆಯುತ್ತಿದ್ದ ಬಗ್ಗೆ ಹಂಪಿಯ ವಿಠಲ ದೇವಸ್ಥಾನದ ಕಂಬವೊಂದರಲ್ಲಿ ಕೆತ್ತಿರುವುದನ್ನು ಕಾಣಬಹುದು. ಅಂಥ ಎಲ್ಲ ಸ್ಮಾರಕ ಶಿಲ್ಪಗಳ ಕುರಿತು ವ್ಯಾಪಕ ಅಧ್ಯಯನ ಕೈಕೊಳ್ಳುವುದು ಅಗತ್ಯವಿದೆ ಎಂದರು. ಹಾಲುಮತ ಅಧ್ಯಯನ ಪೀಠದ ಪ್ರಾಧ್ಯಾಪಕ ಡಾ. ಎಫ್.ಟಿ.ಹಳ್ಳಿಕೇರಿ ಅಧ್ಯಕ್ಷತೆವಹಿಸಿ ಮಾತನಾಡಿ, ಈವರೆಗೆ ಕುರುಬರ ಇತಿಹಾಸ ಮತ್ತು ಸಂಸ್ಕೃತಿಯನ್ನು ಕಾವ್ಯ–ಪುರಾಣಗಳು, ಶಾಸನಾದಿ ದಾಖಲೆ ಗಳು ಹಾಗೂ ಮೌಖಿಕ ಆಕರಗಳ ಮೂಲಕ ಅಧ್ಯಯನ ಮಾಡಲಾಗುತ್ತಿತ್ತು. ಸ್ಮಾರಕ ಶಿಲ್ಪಗಳು ಸಹ ಇಂಥ ಸಮುದಾಯಗಳ ಕುರಿತು ಅಧ್ಯಯನ ಕೈಕೊಳ್ಳಲು ಆಕರಗ ಳಾಗುತ್ತವೆ ಎಂಬುದನ್ನು ವೀರೇಶ ಅವರು ನುಡಿದ್ದಾರೆ. ಅಂಥ ಉಪೇಕ್ಷಿತ ಅಧ್ಯಯನ ಗಳತ್ತ ಯುವ ಸಂಶೋಧಕರು ಮನಸ್ಸು ಮಾಡಬೇಕು ಎಂದರು.ಕಾರ್ಯ ಕ್ರಮದ ಸಂಚಾಲಕ ಗೋಣಿಬಸಪ್ಪ, ಬೋರಯ್ಯ, ಬಾಣದ ಲಕ್ಷ್ಮೀ ನಿರ್ವಹಿಸಿದರು.

# ಆಗಸ್ಟ್ 20ಕ್ಕೆ ಡಿ.ದೇವರಾಜ ಅರಸು ಜನ್ಮದಿನದ ಸಿದ್ಧತೆ

■ ಹಂಪಿ ಟೈಮ್ಸ್ ಕೊಪ್ಪಳ

ಜಿಲ್ಲಾಡಳಿತದ ವತಿಯಿಂದ ಜಿಲ್ಲಾ ಕೇಂದ್ರದಲ್ಲಿ ಆಗಸ್ಟ್ 20 ರಂದು ಆಚರಿಸಲಾಗುವ ಡಿ. ದೇವರಾಜ ಅರಸು ಅವರ 109ನೇ ಜನ್ಮ ದಿನಾಚರಣೆ ಕಾರ್ಯಕ್ರಮವನ್ನು ಅರ್ಥ ಪೂರ್ಣವಾಗಿ ನಡೆಯುವಂತೆ ಸಕಲ ಸಿದ್ಧತೆಗಳನ್ನು ಕೈಗೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಅಪರ ಜಿಲ್ಲಾಧಿಕಾರಿಗಳಾದ ಸಿದ್ರಾಮೇಶ್ವರ ಸೂಚನೆ ನೀಡಿದರು.

ಡಿ.ದೇವರಾಜ ಅರಸು ಅವರ ಜನ್ಮ ದಿನಾಚರಣೆಯ ಕುರಿತಂತೆ ಕೃಷಿ ಇಲಾಖೆ ಕಚೇರಿ ಸಭಾಂಗಣದಲ್ಲಿ ಆಗಸ್ಟ್ 09ರಂದು ಆಯೋಜಿಸಲಾಗಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಪತ್ರಾಂಕಿತ ವ್ಯವಸ್ಥಾಪಕರಾದ ಬಿ.ವಿ ಮಠ ಅವರು ಮಾತನಾಡಿ, ಆಗಸ್ಟ್ 20ರಂದು ಬೆಳಿಗ್ಗೆ 8.30ಕ್ಕೆ ಡಿ.ದೇವರಾಜ ಅರಸು ಅವರ



ಭಾವಚಿತ್ರದ ಮೆರವಣಿಗೆಯು ಶ್ರೀ ಗವಿಮಠದಿಂದ ಶಾದಿಮಹಲ್ ವರೆಗೆ ಗಡಿಯಾರ ಕಂಬದ ಮಾರ್ಗವಾಗಿ ನಡೆಯಲಿದೆ. ಬೆಳಿಗ್ಗೆ 10:30ಕ್ಕೆ ಶಾದಿಮಹಲ್‌ನಲ್ಲಿ ವೇದಿಕೆ ಕಾರ್ಯಕ್ರಮ ನಡೆಸಲು ಎಲ್ಲಾ ರೀತಿಯ ವ್ಯವಸ್ಥೆಗಳನ್ನು ಕೈಗೊಳ್ಳಲಾಗುತ್ತಿದೆ. ಕಾರ್ಯಕ್ರಮಕ್ಕೆ ಉಪನ್ಯಾಸಕರನ್ನು ಸಹ ಈಗಾಗಲೇ ಗುರುತಿಸಲಾಗಿದೆ. ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಆಚರಿಸಲು ಎಲ್ಲರ ಸಹಕಾರ ಅಗತ್ಯವಾಗಿದೆ ಎಂದರು ಹಾಗೂ ಜಯಂತಿ ಆಚರಣೆಯ ರೂಪರೇಷೆಗಳನ್ನು ಸಭೆಗೆ ವಿವರಿಸಿದರು.

ಸಭೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯ ನಿರ್ದೇಶಕರಾದ ಕೊಟ್ರೇಶ ಮರಬನಹಳ್ಳಿ, ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಗಣ್ಯರು ಹಾಗೂ ಸಂಘ–ಸಂಸ್ಥೆಗಳ ಪದಾಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಡಿ.ದೇವರಾಜ ಅರಸು ಅಭಿವೃದ್ಧಿ ನಿಗಮದ ಅಧಿಕಾರಿಗಳು, ಸಿಬ್ಬಂದಿ ಪಾಲ್ಗೊಂಡಿದ್ದರು.

# SSLC ಈ ಬಾರಿ ಫಲಿತಾಂಶ ನಮ್ಮದೆ ಹೈ ಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

Hampi Times Margadarshi

ಮನಸ್ಸು ಮಾಡು – ಕರ್ತವ್ಯ ನಿಷ್ಠನಾಗು – ಕಾದು ನೋಡು

SSLC Hindi Hampi Times Margadarshi - 2024-25

10 ನೇ ತರಗತಿ — ಹಿಂದಿ

## मेरा बचपन

### I . अनुरूपता :

1) अब्दुल कलाम की माता : आशियम्मा ::
अब्दुल कलाम के पिता : ---- (जैनुलाबदीन )
2) रामनंद शास्त्री : पक्षी लक्ष्मण शास्त्री ::
अब्दुल कलाम :------------ (जैनुलाबदीन )
3) जैनुलाबदीन : आशियम्मा ::
जलालुद्दीन : ---------- (जोहरा )
4) जलालुद्दीन : जीजा ::
शम्सुद्दीन : ----------- (चचेरा भाई )
5) गांधीजी : राष्ट्रपिता ::
अब्दुल कलाम :------------ ( राष्ट्रपति )
6) कलाम का पक्का दोस्त : रामनंद शास्त्री ::
कलाम के अंतरंग मित्र :------- ( जलालुद्दीन )
7) नौकाएँ बनानेवालें : जलालुद्दीन :: अखबारोंको
वितरण करनेवाले : -----( शम्सुद्दीन )
8) गिल्लू : रेखाचित्र : मेरा बचपन : ( आत्मकथा )

### II . एक वाक्य में उत्तर लिखिए ।

9) अब्दुल कलाम जी के बचपन में दुर्लभ वस्तु क्या थी ? ( JUNE -2022 )
अब्दुल कलाम जी के बचपन में दुर्लभ वस्तु **पुस्तकें** थी ।

10)अब्दुल कलाम बचपन में किस घर में रहते थे ?
अब्दुल कलाम बचपन में **पुश्तैनी** घर में रहते थे ।

11) अब्दुल कलाम जी के पिता कैसे व्यक्ति थे ?
अब्दुल कलाम जी के पिता **आडंबरहीन** व्यक्ति थे ।

12) अब्दुल कलाम जी के चचेरा भाई कौन थे ?
अब्दुल कलाम जी के चचेरा भाई **शम्सुद्दीन** थे ।

www.hampitimes.com - Hampi Times Margadarshi

### II. तीन-चार वाक्यों में उत्तर लिखिए ।

13) जैनुलाबदीन नमाज के बारे में क्या कहते थे ? ( April -2022, JUNE -2022 )
जैनुलाबदीन नमाज के बारे में इस तरह कहते थे है कि - “ जब तुम नमाज पढते हो तो तुम अपने शरीर से इतर ब्रह्मांड का एक हिस्सा बन जाते हो ; जिसमें दौलत, आयु, जाति या धर्म-पंथ का कोई भेदभाव नही होता ।"

14) जैनुलाबदीन के बारे मे लिखिए ।
जैनुलाबदीन अब्दुल कलाम जी के पिता थे । उनकी कोई बहुत अच्छी औपचारिक शिक्षा नहीं हुई थी । इसके बावजूद वे बुद्दिमान थे और उनमें उदारता की सच्ची भावना थी । उनकी दिनचर्या सुबह चार बजे नमाज पढने के साथ शुरु हो जाती थी । वे अहमद जलालुद्दीन के साथ मिलकर लकडी की नौकाएँ बनाने का काम शुरु किया था । वे अब्दुल कलाम जी को जीवन का साही रास्ता दिखाये ।

15) अब्दुल कलाम जी को जलालुद्दीन ने नई दुनिया का बोध कैसे कराया ?
( JUNE -2023 , April -20224 )
जलालुद्दीन ने अब्दुल कलाम जी को हमेशा शिक्षित व्यक्तियों, वैज्ञानिक खोजो, समकालिन साहित्य और चिकित्सा विज्ञान की उपलब्धियों के बारे में बताते रहते थे । इन्होंने कलाम जी को सीमित दायरे से बाहर निकालकर नई दुनिया का बोध कराया ।

**मुहावरे :**
पौ फटना = प्रभात होना
काम आना = काम में आना , इस्तेमाल होना

ಮಾರ್ಗದರ್ಶಿ ಶಿಕ್ಷಕರು : **ಹೆಚ್.ತುಕಾರಾಮ್ ನಾಯ್ಕ,** ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಮಗಿಮಾವಿನಹಳ್ಳಿ, ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ)

ಕ.ರಾ.ಮಕ್ಕಳ ಸಾಹಿತ್ಯ ಪರಿಷತ್, ವಿಜಯನಗರ ಜಿಲ್ಲೆ

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055